

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 80 Sunday 01-12-2024 E-mail : maruti.b.hosamani76@gmail.com Page: 4 Price : Rs. 1/-


## ಅದ್ದೂರಿಯಾಗಿ ಜರುಗಿದ ಶ್ರೀ ಗೌರಿ ಶಂಕರ ಜಾತ್ರಾ ಮಹೋತ್ಸವ



**ಸಿಹಿ ಕಹಿ ಸುದ್ದಿ,**

**ಬೇಕಿನಾಳ :** ಪ್ರತಿ ವರ್ಷದಂತೆ ಈ ವರ್ಷವು ಕೂಡ ಗೌರಿ ಶಂಕರ ಮೂರ್ತಿಯ ಶ್ರೀ ಬದ್ರೇಶ್ವರ ಮಠದಲ್ಲಿ ಮಾಡಲಾಗುತ್ತೆ 20.11.2024. ರಂದು ಮೂರ್ತಿಯನ್ನು ಮೆರವಣಿಗೆ ಬಾಜ ಭಜಂತ್ರಿ ಮುಖಾಂತರ ಗೌರಿ ಶಂಕರ ಕಟ್ಟೆ (ಗುಡಿ)ಗೆ ಮೂರ್ತಿ ಗಳನ್ನು ತಂದು ವಿಶೇಷ ಪೂಜೆ ಮಾಡಿ ಪ್ರತಿಷ್ಠಾಪನೆ ಮಾಡಲಾಗಿದೆ 11 ದಿನಗಳ ಕಾಲ ದೇವರಿಗೆ ವಿಶೇಷ ಪೂಜೆ ಸಂಜೆ ಊರಿನ ಎಲ್ಲಾ ಮಹಿಳೆಯರು ಆರತಿ ತರೋದು ಸಂಪ್ರದಾಯವಾಗಿದೆ 10 ನೇ. ದಿನ ದಂದು ರಾತ್ರಿ ಶ್ರೀ ಬದ್ರೇಶ್ವರ ಭಜನಾ ಮಂಡಳಿ ಇಂದು ರಾತ್ರಿ ಪೂರ್ತಿ ಭಜನೆ ಮಾಡಲಾಗುವುದು

11 ನೇ. 30-11-2024. ಶನಿವಾರ ದಿನ ದಂದು ಬೆಳಿಗ್ಗೆ ಪೂಜೆ ಅಭಿಷೇಕ್ ಮಾಡಿ ನಂತರ ಪ್ರಸಾದ ವ್ಯವಸ್ಥೆ ಮಾಡಲಾಗುವುದು. ಆ ದಿನ ಸಂಜೆ ಪೂಜೆ ಮಾಡಿ ಟ್ರ್ಯಾಕ್ಟರ್ ನಲ್ಲಿ ಪೂರ್ತಿ ಅಲಂಕಾರ ಮಾಡಿ ಶ್ರೀ ಗೌರಿ ಶಂಕರ ಮೂರ್ತಿಯನ್ನು ಸಕಲ ವಾದ್ಯಗಳು ಡೊಳ್ಳು ಬಾಜ ಭಜಂತ್ರಿ ಭಜನೆ ಹಾಗೂ ಇನ್ನಿತರ ಮನರಂಜನೆಯ್ಯಎ? ಮಾಡುತ್ತ ಮೆರವಣಿಗೆ ಮತ್ತೆ ಶ್ರೀ ಬದ್ರೇಶ್ವರ ಮಠದ ವರೆಗೆ ಹೋಗಿ ಕಾರ್ಯಕ್ರಮ ಜರಗಿತು ಎಂದು ಊರಿನ ಎಲ್ಲಾ ಗುರು ಹಿರಿಯರು ಹಾಗೂ ಯುವಕ ಮಂಡಳಿಯವರು ಸೇರಿ ಜಾತ್ರೆಯನ್ನು ವ್ಯವಸ್ಥೆ ಮಾಡಿ ಯಶಸ್ವಿ ಗೊಳಿಸಿದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶರಣಯ್ಯ.ಈ.ಬೆಕಿನಾಳಮಠ. ಕಲಕೇರಿ**

## ಮಹಿಳೆಯರ ಶೌಚಕ್ಕೆ ನೀರಿಗೆ ಬರ, ಮೂಲಭೂತ ಸೌಲಭ್ಯ ಸಮಸ್ಯೆಗಳ ಆಗರಕ್ಕೆ ಪಿಡಿಓ ದಿವ್ಯ ನಿರ್ಲಕ್ಷ್ಯಕ್ಕೆ, ಜನಾಕ್ರೋಶ

**ಸಿಹಿ ಕಹಿ ಸುದ್ದಿ,**

**ಡಣನಾಯಕನಕೆರೆ:**ವಿಜಯನಗರಜಿಲ್ಲೆಯ ಮರಿಯಮ್ಮನಹಳ್ಳಿ ಪಟ್ಟಣದ ಹೋಬಳಿ ವ್ಯಾಪ್ತಿಯಲ್ಲಿರುವ ಡಣನಾಯಕನಕೆರೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಸೇರುವ ಇಂದಿರಾ ಗಾಂಧಿ ನಗರದಲ್ಲಿ ಮಹಿಳೆಯರು ಬಹಿರ್ದೆಸೆಗೆ ಹೋಗಲು ಶೌಚಾಲಯಗಳು ಇಲ್ಲದೆ ಬಯಲನ್ನೇ ಆಶ್ರಯಿಸಿದ್ದಾರೆ. ಕುಡಿಯುವ ನೀರು, ಸೇರಿದಂತೆ ಮೂಲಭೂತ ಸೌಲಭ್ಯಗಳ ಕೊರತೆಗಳಿದ್ದು. ಅಭಿವೃದ್ದಿ ಗೊಳಿಸ ಬೇಕಿರುವ ಪಿ.ಡಿ.ಓ ಇಲ್ಲಿ ನಿರ್ಲಕ್ಷ್ಯ ವಹಿಸಿರುವುದು ಎದ್ದು ಕಾಣುತ್ತಿದೆ. ನೀರಿನ ಮೋಟಾರ್ ಸ್ಟಾಟರನ ಕೀಲಿ ಕೈ ಪಿ.ಡಿ.ಓ ಆಪ್ತರ ಬಳಿ ಇದ್ದು. 24*7 ಅವರಿಗೆ ನೀರು ಬೇಕೆಂದಾಗ ಆನ್ ಮಾಡಿಕೊಂಡು ಹೋಗುತ್ತಾರೆ ಇನ್ನೂಳಿದ ವರಿಗೆ ನೀರು ಸಿಗಬೇಕೆಂದರೆ ಕಬ್ಬಿಣದ ಕಡಲೆಯಾಗಿದೆ ಇಲ್ಲಿನ ಸಮಸ್ಯೆಗಳ ಬಗ್ಗೆ ಪಿ.ಡಿ.ಓ ಅವರಿಗೆ ತಿಳಿಸಿದರೂ ಸಂಭಂದವಿಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ ಎಂದು ಇಲ್ಲಿನ ಜನರು ಪಿ.ಡಿ.ಓವಿರುದ್ಧಆಕ್ರೋಶವ್ಯಕ್ತಪಡಿಸಿದ್ದಾರೆ. ಹಗರಿಬೊಮ್ಮನಹಳ್ಳಿ ಕ್ಷೇತ್ರದ ಅಂದಿನ ಶಾಸಕರಾಗಿದ್ದ ಶಿರಾಜ್ ಶೇಖ್ ಅವರು 2001- 02 ನೇ. ಸಾಲಿನಲ್ಲಿ "ಇಂದಿರಾ ಗಾಂಧಿ ನಗರ" ವನ್ನು ಮರಿಯಮ್ಮನಹಳ್ಳಿ ಭಾಗದಲ್ಲಿನ ಬಡ ಜನರ ವಾಸ್ತವ್ಯಕ್ಕೆ ಅನುಕೂಲ ವಾಗಲೆಂದು ಯಾವುದೇ ಧರ್ಮ, ಜಾತಿಗಳನ್ನು ಪರಿಗಣಿಸದೆ ಎಲ್ಲಾ ಬಡವರು ಒಂದೇ, ಎಲ್ಲರೂ ಜಾತಿ, ಧರ್ಮ, ಬೇದ ಭಾವಗಳನ್ನು ತೊ-ರೆದು ಒಗ್ಗಟ್ಟಾಗಿ ಏಕತೆಯಿಂದ ಬಾಳ ಬೇಕೆನ್ನುವ ಸದುದ್ದೇಶದಿಂದ 60*80 ಅಡಿಯ ಒಂದೇ ನಿವೇಶನದಲ್ಲಿ ತಲಾ 30*40 ರಂತೆ , 16*9 ಅಡಿಯ ಶೀಟಿನ ಮನೆಗಳನ್ನುಒಂದಕ್ಕೊಂದುಜಂಟಿಯಾಗಿ ಸುಮಾರು 240 ಮನೆಗಳನ್ನು ನಿರ್ಮಿಸಿ ಅಂದಿನ ಅಗತ್ಯತೆನುಗುಣವಾಗಿ ರಸ್ತೆ, ಚರಂಡಿ, ವಿದ್ಯುತ್ ಇತರೆ ಮೂಲಭೂತ ಸೌಲಭ್ಯಗಳನ್ನುಒದಗಿಸಿಫಲಾನುಭವಿಗಳಿಗೆ ಕೊಟ್ಟಿದ್ದರು.

ನಗರಕ್ಕೆ ರೂಪ ಕೊಟ್ಟವರು ಇಂದಿರಾ ನಗರಕ್ಕೆ ಮೂಲಭೂತ ಸೌಲಭ್ಯಗಳಿಂದ ಅತಂತ್ರ ಪರಿಸ್ಥಿತಿ ಎದುರಿಸುತಿತ್ತು. ಕಾಲ ಕಳೆಯುತ್ತಿದ್ದಂತೆ ಮೂಲಭೂತ ಸೌಲಭ್ಯಗಳು ಮರೀಚಿಕೆ ಯಾಗುತ್ತಾ ಹೋದವು ಸೌಲಭ್ಯಗಳಿಗಾಗಿ ಇಲ್ಲಿನ ಜನರೊಂದಿಗೆ ವಕೀಲರಾದ ಎಲ್. ಮಲ್ಲಿಕಾರ್ಜುನ, ಜಗದೀಶ, ಗುಂಡ ಸೋಮಣ್ಣ, ಎಲ್. ಪಿ. ಹನುಮಂತಪ್ಪ ಇತರರು ಸೇರಿ ನಿರಂತರವಾಗಿ ಬಳ್ಳಾರಿ ಜಿಲ್ಲಾಧಿಕಾರಿ,ಹೊಸಪೇಟೆಯ ಸಹಾಯಕ ಆಯುಕ್ತರನ್ನು ಮತ್ತು ತಹಶೀಲ್ದಾರರನ್ನು ಸಂಪರ್ಕಿಸಿಅಧಿಕಾರಿಗಳಿಂದಮೂಲಭೂತ ಸೌಲಭ್ಯಗಳನ್ನು ಪಡೆದು ಕೊಳ್ಳುತ್ತಿದ್ದರು. ನಂತರ ಪಟ್ಟಣ ಪಂಚಾಯಿತಿಗೂ, ಡಣನಾಯಕನ ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿ ನಿರಂತರ ಮೂಲಭೂತ ಸೌಲಭ್ಯ ಸೇರಿದಂತೆ ಇತರೆ ಸೌಲಭ್ಯಗಳನ್ನು ದೊರಕಿಸಿ ಕೊಡಬೇಕೆಂದು ಹೋರಟ ಮಾಡಿದ್ದರಿಂದ ಕೊನೆಗೂ ಇಂದಿರಾ ನಗರವು 2020 - 2021 ನೇ. ಸಾಲಿನಲ್ಲಿ ಡಣನಾಯಕನ ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಿ ಆದೇಶ ಹೊರಡಿಸಲಾಗಿ ಕೊನೆಗೆ ಒಂದು ರೂಪ ಪಡೆಯಿತು.

ನಂತರ ಡಣನಾಯಕನಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಲಾಯಿತು. ಮೊಟ್ಟ ಮೊದಲ ಬಾರಿಗೆ 2021 ನೇ. ಸಾಲಿನಲ್ಲಿಗ್ರಾಮ ಪಂಚಾಯಿತಿ ಚುನಾವಣೆ ನಡೆದು ಇಲ್ಲಿಂದ ಇಬ್ಬರು ಸದಸ್ಯರು ಆಯ್ಕೆಯಾಗಿ ಅದರಲ್ಲಿ ಅಕ್ಕಮಹಾದೇವಿ ಗುಂಡಾಸ್ವಾಮಿ ಎನ್ನುವವರು ಮೊದಲ ಬಾರಿಗೆ ಅಧ್ಯಕ್ಷರಾದರು.



ಸಮಸ್ಯೆ:- ಪ್ರಸ್ತುತವಾಗಿ ನೀರಿನ ವ್ಯವಸ್ಥೆ ಇದ್ದರೂ ಅವೈಜ್ಞಾನಿಕವಾಗಿ ಪೈಪ್ ಲೈನ್ ಮಾಡಿರುವುದರಿಂದ ಕಟ್ಟ ಕಡೆಯ ಮನೆಗೆ ನೀರು ಸಿಗುತ್ತಿಲ್ಲ. ನೀರಿನ ಮೋಟಾರ್ ಸ್ಟಾಟರ್ ಕೀಲಿ ಕೈ ಪಿ.ಡಿ.ಓ ಆಪ್ತರ ಬಳಿ ಇರುವುದರಿಂದ ಅವರಿಗೆ ಬೇಕಾದಾಗ ಆನ್ ಮಾಡಿಕೊಂಡು ಸಾಕಾದಾಗ ಆಫ್ ಮಾಡುತ್ತಾರೆ. ಇನ್ನೂಳಿದ ವರಿಗೆ ನೀರು ಸಿಗುವುದಿಲ್ಲ. ಇಲ್ಲಿ ವಾಟರ್ ಮ್ಯಾನ್ ಇಲ್ಲ, ಲೈಟ್ ಹಾಕುವವರನ್ನು ನೇಮಿಸಬೇಕು. ಸಮಸ್ಯೆ ಕುರಿತು ಎಷ್ಟೋ ಬಾರಿ ಪಿ.ಡಿ.ಓ ಗಮನಕ್ಕೆ ತಂದರೆ ಸಂಬಂಧವೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಅಧಿಕಾರಿಗಳು ಕೂಡಲೇ ಭೇಟಿ ನೀಡಿ ಸಮಸ್ಯೆ ಸರಿಪಡಿಸಿ ಪ್ರತಿಯೊಬ್ಬರಿಗೂ ನೀರು ಸಿಗುವಂತೆ ಮಾಡಬೇಕು. ಇಲ್ಲವಾದಲ್ಲಿ ಪಂಚಾಯಿತಿಯ ವೈಫಲ್ಯದ ವಿರುದ್ಧ ಧರಣಿ ನಡೆಸಲಾಗುವುದು ಎಂದು ಇಲ್ಲಿನ ಸಾರ್ವಜನಿಕರು ಆಕ್ರೋಶ ಹೊರ ಹಾಕಿದರು.

ಸ್ಟಾಟರ್ ಕೀಲಿ ಕೈಯಾರ ಬಳಿ ಇದೆ ಗೊತ್ತಿಲ್ಲ ಅದನ್ನು ವಿಚಾರಿಸಿ ಹಿಂಪಡೆಯುತ್ತೇನೆ. ಈ ಮೊದಲು ನೀರು ಬಿಡಲು ವಾಟರ್ ಮ್ಯಾನ್ ಇಟ್ಟಿದ್ದೆವು ಆಂತರಿಕ ಸಮಸ್ಯೆಗಳಿಂದ ಅವರನ್ನುತೆಗೆದಿದ್ದು.ಮತ್ತೆ ಯಾರನ್ನಾದರೂ ನೇಮಿಸಿ ಬೆಳಗ್ಗೆ ಎರೆಡು ತಾಸು ಸಾಯಂಕಾಲ ಎರಡು ತಾಸು ನೀರು ಬಿಡಲು ಹೇಳುತ್ತೇವೆ. ಇಡೀ ನಗರಕ್ಕೆ ಚರಂಡಿ ಮಾಡಲು ನಮ್ಮಲ್ಲಿ ಅನುದಾನದ ಕೊರತೆ ಆಗುತ್ತದೆ. ನರೇಗಾದಲ್ಲಿ ಎಷ್ಟು ಬೇಕೋ ಅಷ್ಟು ಮಾಡಿಸುತ್ತೇವೆ. ಸಂಪೂರ್ಣವಾಗಿ ರಸ್ತೆ ಮತ್ತು ಚರಂಡಿ ಶಾಸಕರುಮಾಡಿಸಬೇಕಾಗುತ್ತದೆ.ವೈಯಕ್ತಿಕ ಶೌಚಾಲಯಗಳನ್ನು ಈಗಾಗಲೇ ಹಂತ ಹಂತವಾಗಿ ಸ್ಥಳೀಯ ಖಾರ್ಖಾನೆಯ ಸಹಕಾರ ದಿಂದ ಕೊಡುತ್ತಿದ್ದೇವೆ.

**- ಜಿಲಾನ್, ಪಿಡಿಓ, ಡಣನಾಯಕನ ಕೆರೆ ಗ್ರಾಮ ಪಂಚಾಯಿತಿ.**

ಇಂದಿರಾ ನಗರ ನಿರ್ಮಾಣವಾಗಿ ದಶಕಗಳೇ ಕಳೆದಿವೆ. ಚರಂಡಿಗಳಿಲ್ಲದೇ ಮನೆಯ ತ್ಯಾಜ್ಯ ನೀರು ರಸ್ತೆಯ ಮೇಲೆಲ್ಲಾ ಹರಿಯುತ್ತಿವೆ ಇದರಿಂದ ಜನರಿಗೆ ಕಿರಿ ಕಿರಿಯಾಗುತ್ತಿದೆ. ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು, ವಿದ್ಯುತ್ ದೀಪಗಳು ಹಾಳಾಗಿವೆ. ನೀರಿನ ಬವಣೆ ಹೇಳ ತೀರದಾಗಿದೆ.ನೀರಿದ್ದರೂ ಕಟ್ಟ ಕಡೆ-ಯ ಮನೆಯವರಿಗೆ ನೀರು ತಲುಪುತ್ತಿಲ್ಲ. ಪಿ.ಡಿ.ಓ ಆಪ್ತರ ಬಳಿ ಮೋಟಾರ್ ಸ್ಟಾಟರ್ ಕೀಲಿ ಕೈ ಇದ್ದು. ಅವರಿಗೆ ಬೇಕೆಂದಾಗ ಆನ್ ಮಾಡಿ ಕೊಳ್ಳುತ್ತಾರೆ ಇತರರಿಗೆ ನೀರ ಸಿಗುವುದಿಲ್ಲ. ಈ ಕುರಿತು ಪಿ.ಡಿ.ಓ ಗೆ ಹೇಳಿದರೆ ಸಂಬಂಧವಿಲ್ಲ ಎನ್ನುವಂತೆ ವರ್ತಿಸುತ್ತಿದ್ದಾರೆ.

**- ಎಲ್.ಮಂಜುನಾಥ ಡಿ.ಎಸ್.ಎಸ್. ಅಧ್ಯಕ್ಷ ಇಂದಿರಾ ನಗರ ನಿವಾಸಿ.**

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಬಿ.ವ್ಹಿ.ವ್ಹಿ.ಎಸ್. ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯದ ಪದವಿ ವಿದ್ಯಾರ್ಥಿನಿಯರ ಶ್ರೇಷ್ಠ ಸಾಧನೆ

**ಬಾಗಲಕೋಟೆ :** ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿನಿಯರ ಪರೀಕ್ಷೆ ಫಲಿತಾಂಶ ಪ್ರಕಟವಾಗಿದೆ. ಬಾಗಲಕೋಟೆಯ ಬಿ.ವ್ಹಿ.ವ್ಹಿ.ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಬಿ.ಎ. 100%, ಬಿ.ಎಸ್ಸಿ.95%,ಬಿ.ಕಾಂ.97.29%ಫಲಿತಾಂಶ ಬಂದಿದೆ. ಬಿ. ಎ. ವಿಭಾಗದಲ್ಲಿ ರೇಶ್ಮಾ ಮುದ್ದೇಬಿಹಾಳ (92.76%)ಪ್ರಥಮ, ನೇತ್ರಾವತಿ ಯಂಕಂಚಿ(90.92%)ದ್ವಿತೀಯ, ಪ್ರಿಯಾಂಕಾ ಚವ್ಹಾಣ(89.38)ತೃತೀಯ. ಬಿ. ಎಸ್ಸಿ. ವಿಭಾಗದಲ್ಲಿ ಪೂಜಾ ಗಾಮಾ(98.9%)ಪ್ರಥ-ಮ, ಪ್ರಿಯಾಂಕಾ ಕುಂಬಾರ(96.3%)ದ್ವಿತೀಯ, ಸಂಗಮ್ಮ ಸಜ್ಜನ(96%)ತೃತೀಯ, ಬಿ. ಕಾಂ. ವಿಭಾಗದಲ್ಲಿ ಪ್ರೇಮಾ ಹುನಗುಂದ( 9 8 . 9 % ) ಪ್ರಥಮ, ಅಕ್ಷತಾ ಪೊಲೇಶಿ(97.3%)ದ್ವಿತೀಯ, ಸವಿತಾ ಜಿರಗಾಳ(96.6%)ತೃತೀಯ, ನಾಗರತ್ನಾ ಕಾವಳ್ಳಿ (96.6%)ತೃತೀಯ ಸ್ಥಾನ ಪಡೆದು ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.




ವಿಷಯವಾರು ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿನಿಯರು,

ಇನ್‌ಕಮ್ ಟ್ಯಾಕ್ಸ ಲಾ & ಪ್ರ್ಯಾಕ್ಟೀಸ್ -2 ನಲ್ಲಿ ಪ್ರೇಮಾ ಹುನಗುಂದ ಅಡ್ವಾನ್ಸ ಫೈನಾನಶಿಯಲ್ ಮ್ಯಾನೇಜಮೆಂಟ್‌ನಲ್ಲಿ ಅಕ್ಷತಾ ಪೊಲೇಶಿ, ಪ್ರೇಮಾ ಹುನಗುಂದ, ಮ್ಯಾನೇಜಮೆಂಟ್ ಅಕೌಂಟಿಂಗ್‌ನಲ್ಲಿ ಅಕ್ಷತಾ ಪೊಲೇಶಿ. ಪ್ರೇಮಾ ಹುನಗುಂದ. ಕಸ್ಟಮರ್ ರಿಲೇಶನ್‌ಶಿಪ್ ಮ್ಯಾನೇಜಮೆಂಟ್‌ನಲ್ಲಿ ಪ್ರೇಮಾ ಹುನಗುಂದ. ಇನ್ನೂ ಪಿ.ಟಿ.ಆರ್. ದಲ್ಲಿ ನಾಗರತ್ನಾ ಕಾವಳ್ಳಿ, ನೀಲಾಂಬರಿ ಸಣ್ಣಪ್ಪನವರ,ಅಶ್ವಿನಿ ಲಮಾಣಿ,ಐಶ್ವರ್ಯ ಮುಚಖಂಡಿ, ಸೌಮ್ಯಾ ರಂಗೋಜಿ, ಸವಿತಾ ಜೀರಗಾಳ. ಬಿ.ಎಸ್ಸಿ. ವಿಭಾಗದಲ್ಲಿ 100 ಕ್ಕೆ 100 ಅಂಕ ಪಡೆದ ವಿದ್ಯಾರ್ಥಿನಿಯರಾದ ಗಣಿತ ವಿಷಯದಲ್ಲಿ ತೇಜಸ್ವಿನಿ ಮಾಗಿ

, ಸಸ್ಯಶಾಸ್ತ್ರ -ಪೂಜಾ ಗಾಮಾ, ಪ್ರಾಣಿಶಾಸ್ತ್ರ- ಅರ್ಪಿತಾ ಕುಲಕರ್ಣಿ ಸೇರಿದಂತೆ ಈ ಎಲ್ಲ ಸಾಧನೆ ಗೈದ ವಿದ್ಯಾರ್ಥಿನಿಯರಿಗೆ ಬಿ.ವ್ಹಿ.ವ್ಹಿ.ಸಂಘದ ಮಾನ್ಯ ಕಾರ್ಯಾಧ್ಯಕ್ಷರಾದ ಡಾ. ವೀರಣ್ಣ ಸಿ. ಚರಂತಿಮಠ, ಗೌರವ ಕಾರ್ಯದರ್ಶಿಗಳಾದ ಮಹೇಶ ಎನ್. ಅಥಣಿ, ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀ ಗುರುಬಸವ ಎಸ್. ಸೂಳಿಭಾವಿ, ಆಡಳಿತಾಧಿಕಾರಿಗಳಾದ ಡಾ. ವ್ಹಿ. ಎಸ್. ಕಟಗಿಹಳ್ಳಿಮಠ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀಮತಿ ಎಸ್. ಜೆ. ಒಡೆಯರ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

## ನೌಕರರ ಸಂಘದ ಆಡಳಿತ ಮಂಡಳಿಗೆ ಆಯ್ಕೆ



**ಗುಳೇದಗುಡ್ಡ :** ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ತಾಲೂಕು ಘಟಕ ಗುಳೇದಗುಡ್ಡ ಇದರ 2024-29 ರ ಅವಧಿಗೆ ಅಧ್ಯಕ್ಷರಾಗಿ ಹುಲ್ಲಿಕೇ-ರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಪಿ.ವಿ.ಜಾದವ್, ಕಾರ್ಯದರ್ಶಿಗಳಾಗಿ ತಿಮ್ಮಸಾಗರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ನಾಗರಾಜ್ ಎಚ್., ಖಜಾಂಚಿಗಳಾಗಿ ಸರ್ಕಾರಿ ಸಮೂದಾಯ ಆರೋಗ್ಯ ಕೇಂದ್ರದ ಸಿಬ್ಬಂದಿ ಆರ್.ಎಂ.ಕೋತವಾಲ, ಮತ್ತು ರಾಜ್ಯ ಪರಿಷತ್ ಸದಸ್ಯರಾಗಿ ಸ್ಥಳೀಐ ಬಾಲಕಿಯರ ಪದವಿ ಪೂರ್ವ ಕಾಲೇಜು ಉಪಪ್ರಾಚಾರ್ಯ ಎಂ.ಪಿ.ಮಾಗಿ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಎ.ಬಿ.ಅಚನೂರ ತಿಳಿಸಿದ್ದಾರೆ.

ಇತ್ತೀಚಿಗೆ ನಡೆದ ಗುಳೇದಗುಡ್ಡ ತಾಲೂಕು ಘಟಕದ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಸದಸ್ಯರನ್ನಾಗಿ ಡಾ.ಎಸ್.ಪಿ.ಜಾದವ್, ಎಸ್.ಹೆಚ್. ಜೋಗಿನ, ಪ್ರಶಾಂತ ಹೊನ್ನಳ್ಳಿ, ವಿ.ಪಿ.ದಾಸರ, ರಾಜಗೋಪಾಲ್ ಉಂಡಿಗೇರಿ, ಮಲ್ಲಿಕಾರ್ಜುನ ಮಣ್ಣೂರ, ವಿಠ್ಠಲ ಕಳಸಾ, ಗೀತಾ ಜಾಪಾಳ, ಶೋಭಾ ನೀಲಣ್ಣವರ್, ನಾಗಪ್ಪ ಕರಡಿಗುಡ್ಡ, ಪ್ರದೀಪಕುಮಾರ್ ಬಬಲಾದಿ, ರಾಮಚಂದ್ರ ಮೇತ್ರಿ, ಎಸ್.ಎಸ್.ಅಂಗಡಿ, ಎಂ.ಎಸ್.ಹಿರೇಮಠ ಅವರು ಆಯ್ಕೆಗೊಂಡಿದ್ದಾರೆ ಎಂದು ಚುನಾವಣಾ ಅಧಿಕಾ-ರಿಗಳಾದ ಎ.ಬಿ.ಅಚನೂರ ತಿಳಿಸಿದ್ದಾರೆ.

## ವಸತಿಯುತ ಕಾಯಕ ಬಂಧುಗಳ ವಿಷಯ ತರಬೇತಿದಾರ ತರಬೇತಿ ಕಾರ್ಯಕ್ರಮ

**ಬಾಗಲಕೋಟೆ:**ದಿ.22.11.2024ರಂದುಜಿಲ್ಲಾ ಕೃಷಿ ತರಬೇತಿ ಕೇಂದ್ರ ಬಾಗಲಕೋಟಯಲ್ಲಿ ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಗಳ 5 ತಾಲೂಕುಗಳಿಂದ 30 ಜನ-ರಿಗೆ 10 ದಿನಗಳ ಕಾಲ ದಿನಾಂಕ 21/11/24 ರಿಂದ 30/11/24 ರವರೆಗೆ ವಸತಿಯುತ ಕಾಯಕ ಬಂಧುಗಳ ವಿಷಯ ತರಬೇತಿ-ದಾರ ತರಬೇತಿ ಕಾರ್ಯಕ್ರಮವು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಬಾಗಲಕೋಟಯಲ್ಲಿ ನಡೆಯುತ್ತಿದೆ ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕೆ. ಎಮ್.ಜಾನಕಿ ಅವರು ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಗ್ರಾಮ ಸ್ವರಾಜ್ ಅಭಿಯಾನದ ವತಿಯಿಂದ ನಡೆಯುತ್ತಿರುವ 10 ದಿನಗಳ ಕಾಲ ವಸತಿಯುತ ತರಬೇತಿದಾರ ತರಬೇತಿ ಕಾರ್ಯಕ್ರಮ ಕಾಯಕ ಬಂಧುಗಳಿಗೆ ಮನ ಮುಟ್ಟುವ ಹಾಗೆ ಈ ತರಬೇತಿ-ದಾರರು ಹೇಳುವುದು ಅವಶ್ಯಕವಾಗಿರುತ್ತದೆ. ಕಾರ್ಯಕ್ರಮದ ಸಂಗಡಿಕರು ತುಂಬಾ ಶ್ರಮದಿಂದ ವಿಷಯಗಳನ್ನು ಸಂಗ್ರಹ ಮಾಡಿ ವಿವಿಧಸಂಪನ್ಮೂಲವ್ಯಕ್ತಿಗಳಿಂದಕೂಡಿಕರಿಸಿ ಹೇಳಿಕೊಡಲು ಸನ್ನಿದ್ದರಾಗಿದ್ದಾರೆ ಅದಕ್ಕಾಗಿ ತಾವುಗಳು ಉತ್ಸುಕತೆಯಿಂದ ಭಾಗವಹಿಸಿ ಕಾಯಕ ಬಂಧುಗಳಿಗೆ ನೆರವಾಗಲು ತಮ್ಮ ಸಹಕಾರ ಅಗತ್ಯವಾಗಿರುತ್ತದೆ.



ಕಾಯಕ ಬಂದುಗಳ ತರಬೇತಿ ಕೈಪಿಡಿಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅರ್ಪಣೆ ಮಾಡಲಾಯಿತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿ. ಎನ್.ಸಿಂಹ, ಗ್ರಾಮ ಸ್ವರಾಜ್ಯ ಅಭಿಯಾನದ ರಾಜ್ಯಮಟ್ಟದ ಸಲಹಾ ಸಮಿತಿಯ ಸದಸ್ಯರು ಅಧ್ಯಕ್ಷತೆಯ ಭಾಷಣವನ್ನು ಮಾಡಿ ಗ್ರಾಮ ಸ್ವರಾಜ್ಯ ಅಭಿಯಾನವು ಮಾನ್ಯ ಜಿಲ್ಲಾಧಿಕಾ-ರಿಗಳ ಸಹಕಾರ ಅತ್ಯಗತ್ಯವಾಗಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನುಶ್ರೀ ಅಶೋಕ್ ಯರಗಟ್ಟಿ ರಾಜ್ಯ ಸಯೋಜಕರು, ಉತ್ತರ ವಲಯ ಗ್ರಾಮ ಸ್ವರಾಜ್ ಅಭಿಯಾನ - ಕರ್ನಾಟಕ ಪ್ರಾಥಮಿಕ ನುಡಿಯನು ಮಾತನಾಡಿ ಗ್ರಾಮ ಸ್ವರಾಜ್ಯ ಅಭಿಯಾನದ ಹಿನ್ನೆಲೆ ಹಾಗೂ ಪ್ರಸ್ತುತ ಅಭಿಯಾನದ ಕೆಲಸಗಳು ಮುಂದಿನ ಯೋಜನೆಗಳ ಬಗ್ಗೆ ಮಾತನಾಡಿದರು.

ದಿನಾಂಕ 21/11/24 ರಿಂದ 30/11/2024ರವರೆಗೆ ಈ ಕಾರ್ಯಕ್ರಮವು ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ನಡೆಯುತ್ತದೆ. ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ 5 ತಾಲೂಕಿನವರು ಇರುತ್ತಾರೆ. ಈ 10 ದಿನಗಳಲ್ಲಿ 5 ಜನ ಕ್ಷೇತ್ರ ಭೇಟಿ ಹಾಗೂ 19 ವಿಷಯಗಳ ಬಗ್ಗೆ ಮಂಡನೆ ಆಗುತ್ತದೆ.

ಈ ತರಬೇತಿ ಹೊಂದಿದವರು ಪ್ರತಿ ತಾಲೂಕಿನಿಂದ 10 ಬ್ಯಾಚುಗಳನ್ನು ಮಾಡಿ ಪ್ರತಿ ಬ್ಯಾಚಿನಲ್ಲಿ 30 ಜನರಂತೆ ಒಟ್ಟಾರೆಯಾಗಿ ಪ್ರತಿ ತಾಲೂಕಿನಿಂದ 300 ಕಾಯಕ ಬಂಧುಗಳಿಗೆ ತರಬೇತಿ ಕೊಡುವ ಗುರಿ ಇರುತ್ತದೆ. ಈ ತರಬೇತಿಯಲ್ಲಿ 2400 ಕಾಯಕ ಬಂದುಗಳಿಗೆ ತರಬೇತಿ ಮುಂದಿನ ಜನವರಿ ಒಳಗೆ ಕೊಡುವುದು ಗುರಿ ಇರುತ್ತದೆ ಗ್ರಾಮ ಸ್ವರಾಜ್ ಅಭಿಯಾನದ ಹಿನ್ನೆಲೆ ಹಾಗೂ ತರಬೇತಿಯ ಅವಶ್ಯಕತೆಗಳನ್ನು ಕಾಯಕ ಬಂಧುಗಳಿಗೆ ನೀಡುವಂತಹ ತರಬೇತಿಗಳು ಬಹು ಉಪಯೋಗ ಆಗಿರುತ್ತದೆ ಎಂದು ಸಂಯೋಜಕರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ.ಎನ್.ಸಿಂಹ, ಅವರು 10 ದಿನಗಳ ಕಾಲ ನಡೆಯುವ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸಿದರು.

ಸ್ವಾಗತವನ್ನು ಶ್ರೀ ರಮಶ್ ರಾಜ್ಯಮಟ್ಟದ ತರಬೇತಿದಾರರು, ಕಾರ್ಯಕ್ರಮ ನಿರೂಪಣೆ ಡಾ.ಸುರೇಶ್, ಸ್ಥಳೀಯ ಸಂಸ್ತೆ, ಬಿಳಗಿ, ಮಾಡಿದರು.

ರಾಜ್ಯ ಮಟ್ಟದ ತರಬೇತಿದಾರರು, ಶ್ರೀ ಕುಮಾರ್, ಸವಿತಾ ಒಟ್ಟು 30 ಜನ ತರಬೇತಿ ತೆಗೆದುಕೊಳ್ಳುವವರು. 5 ತಾಲೂಕಿನ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಿಂದ ಭಾಗವಹಿಸದ್ದರು.

## ಮಾನವೀಯ ಮೌಲ್ಯಗಳೆ ವಚನ ಸಾಹಿತ್ಯ: ವಿ.ಸಿ. ನಾಗಠಾಣ

**ವಿಜಯಪುರ :** ಮಾನವೀಯ ಮೌಲ್ಯಗಳೇ ವಚನ ಸಾಹಿತ್ಯದ ಸಾರ ವಚನ ಸಾಹಿತ್ಯ ಸನ್ಮಾಗ9 ತೋರಿಸುತ್ತದೆ. ಸಾಹಿತ್ಯದ ಮೂಲ ವಚನ ಸಾಹಿತ್ಯ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ವಿ ಸಿ ನಾಗಠಾಣ ಅಭಿಪ್ರಾಯ ವ್ಯಕ್ತಪಡಿಸಿದರು.

ಶನಿವಾರ ನಗರದ ಆನಂದ ನಗರದಲ್ಲಿರುವ ಶ್ರೀ ದಾನಮ್ಮ ದೇವಿ ಉತ್ಸವ 14 ನೇ ಜಾತ್ರಾ ಮಹೋತ್ಸವದ ನಿಮಿತ್ತ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ಇವರ ಆಶ್ರಯದಲ್ಲಿ ವಚನ ಸಾಹಿತ್ಯ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ಬಸವಾದಿ ಶರಣರ ಚಿಂತನೆಗಳು ಇಂದಿಗೂ ಪ್ರಸ್ತುತ ಹಾಗೂ ಅತ್ಯಗತ್ಯ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ 17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಡಾ. ಭುವನೇಶ್ವರಿ ಮೇಲಿನಮಠ ಮಾತನಾಡಿ, ಕನ್ನಡ ಸಾಹಿತ್ಯ ಬೆಳೆಯಲು ವಚನ ಸಾಹಿತ್ಯದಿಂದ ಸಾಧ್ಯ. ಶಿವಶರಣರು ಸಾಮಾಜಿಕ ಕಂದಾಚಾರ ಹೋಗಲಾಡಿಸಿ ಸಮಸಮಾಜವನ್ನು ಕಟ್ಟಲು ವಚನ ಸಾಹಿತ್ಯ ಪ್ರೇರಣೆ ಎಂದರು.



ನ್ಯಾಯವಾದಿ ಮಹಮ್ಮದ ಗೌಸ ಹವಾಲ್ದಾರ ಮಾತನಾಡಿ, ಜಗತ್ತಿನ ಎಲ್ಲ ವಿಶ್ವ ವಿದ್ಯಾಲಯಗಳ ಜ್ಞನವನ್ನು ಮೀರಿಸುವ ಶಕ್ತಿ ಬಸವಾದಿ ಶರಣರಲ್ಲಿ ಅಡಗಿದೆ. ನೀತಿ, ಧರ್ಮ,ಕರುಣೆ ಹಾಗೂ ಮಾನವೀಯ ಮೌಲ್ಯಗಳೆ ವಚನ ಸಾಹಿತ್ಯ. ನಾವು ನಮ್ಮ ಸಂಸ್ಕೃತಿ ಅಳವಡಿಸುವದರ ಜೊತೆಗೆ ಇತರ ಧರ್ಮದ ಸಂಸ್ಕೃತಿಯನ್ನು ಗೌವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ವಚನ ಸಾಹಿತ್ಯದ ಮೂಲಕ ಮಾನವ ಕುಲಕ್ಕೆ ತಿಳಿಸಿ ಕೊಟ್ಟವರು ಬಸವಾದಿ ಶರಣರು. ಹನ್ನೆರಡನೇ ಶತಮಾನ ವೈಚಾರಿಕ ಕ್ರಾಂತಿಯ ಬದಲಾವಣೆಯ ಕಾಲವಾಗಿದೆ.

ಸಮಾಜದಲ್ಲಿನ ಅನಿಷ್ಟ ಪದ್ಧತಿ, ಜಾತೀಯತೆ, ಅಸಮಾನತೆ, ಅಸ್ಪೃಶ್ಯತೆ ಈ ಎಲ್ಲವನ್ನು ವಚನಗಳ ಮೂಲಕ ಹೋಗಲಾಡಿಸಿ ಸಮತಾ ಸಮಾಜ ನಿರ್ಮಿಸಿದವರು ಬಸವಾದಿ ಶರಣರು ಎಂದರು.

ವಚನ ಸಾಹಿತ್ಯದಲ್ಲಿ ಶರಣೆಯರ ಕೊಡುಗೆ ಕುರಿತು ಸಾಹಿತಿ ಶೋಭಾ ಮೇಡೆಗಾರ ಮಾತನಾಡಿ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ಮುಕ್ತಾಯಕ್ಕ, ಅಕ್ಕಮಹಾದೇವಿ, ಕಲ್ಯಾಣಮ್ಮ. ಮಲ್ಲಿಗೆಮ್ಮ ಮುಂತಾದವರು ವಚನ ಸಾಹಿತ್ಯದಲ್ಲಿ ಕಾಯಕಕ್ಕೆ ಮಹತ್ವ ನೀಡಿದವರು ಆಶೆ ಶರಣರಿಗೆ ಇರಬಾರದು ಎಂದು ಪ್ರಬಲವಾಗಿ ಮಂಡಿಸಿದರು.

ವಚನಗಾರ್ತಿಯರ ಪ್ರಭಾವ ಹಾಗೂ ಕೊಡುಗೆ ಅಪಾರವಾಗಿದೆ. ವಚನ ಸಾಹಿತ್ಯ ವಿಶ್ವದಾದ್ಯಂತ ಪ್ರಜ್ವಲಿಸುತ್ತಿದೆ. ಎಮ್.ಬಿ. ಸಜ್ಜನ, ಸದಾಶಿವ ನಾಡಗೌಡ, ಸುಭಾಷ ಕರಿಕಬ್ಬಿ ವೇದಿಕೆಯ ಮೇಲಿದ್ದರು.

ಅಪ್ಪು ಇಟ್ಟಂಗಿ, ಎಮ್.ಬಿ. ಮೂಲಿಮನಿ, ಎಚ್.ಎಮ್. ಬೋರಾವತ, ಎಸ್. ಎಚ್. ಪಾಟೀಲ, ರವೀಂದ್ರ ಬಾವೂರ, ಹಾಸಿಂಪೀರ ವಾಲಿಕಾರ, ಪ್ರೇಮ ನಂದಿ, ಎಮ್.ಎಸ್. ಮೇಟಿ, ಬಸವರಾಜ ಮರನೂರ, ಜಯಶ್ರೀ ಹಿರೇಮಠ, ಕಮಲಾ ಹೂಗಾರ, ಸುಜಾತ ಕತ್ತಿ, ಕಾಶಿಬಾಯಿ ಬೋರಾವತ, ರುದ್ರಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಕೊಣ್ಣೂರ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ





**ಯಲ್ಲಟ್ಟಿ :** ಪದವಿ ಪೂರ್ವ ಶಿಕ್ಷಣ ಇಲಾಖೆ, ಬಾಗಲಕೋಟೆ ಮತ್ತು ಮುಧೋಳದ ಸಾಯಿ ನಿಕೇತನ ವಿಜ್ಞಾನ ಪದವಿಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಜರುಗಿದ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಇಲ್ಲಿಯ ಕೊಣ್ಣೂರ ವಿಜ್ಞಾನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕುಮಾರಿ ಸಾವಿತ್ರಿ ಪತ್ತಾರ (ಭಕ್ತಿ ಗೀತೆ) ಪ್ರಥಮ ಸ್ಥಾನ, ಹಂಸಿಕಾ ಜಾಧವ ( ಇಂಗ್ಲೀಷ್ ಪ್ರಬಂಧ ಸ್ಪರ್ಧೆ) ದ್ವಿತೀಯ ಸ್ಥಾನ, ಮಯೂರ ಮಗದುಮ್ ( ಭಾವಗೀತೆ) ಪ್ರಥಮ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಸದರಿ ವಿದ್ಯಾರ್ಥಿಗಳನ್ನು ಕೊಣ್ಣೂರ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೊಣ್ಣೂರ, ಆಡಳಿತಾಧಿಕಾರಿ ಶೀತಲ ಕೊಣ್ಣೂರ, ಶಿವಾನಂದ ಕಂದಗಲ್ ಅಭಿನಂದಿಸಿದ್ದಾರೆ.

# ಅಂತರ ಮಹಾವಿದ್ಯಾಲಯಗಳ 18ನೇ ಅಥ್ಲೇಟಿಕ್ಸ್ ಕ್ರೀಡಾಕೂಟ

## ಕ್ರೀಡಾಕೂಟದಲಿ ಲಕ್ಷ್ಮೀ ಕಮತಗಿ, ಸುಶ್ಮೀತಾ ಬಡಿಗೇರ ನೂತನ ದಾಖಲೆ



**ಬಾಗಲಕೋಟೆ :** ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಅಂತರ ಮಹಾವಿದ್ಯಾಲಯಗಳ ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ಜೊತೆಗೆ ಚಿನ್ನದ ಪದಕ ಪಡೆದುಕೋಂಡು ವಿಶ್ವವಿದ್ಯಾಲಯಕ್ಕೆ ನೂತನ ದಾಖಲೆ ಮಾಡಿದೆ.

ವಿಜಯಪುರದಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಂತರ ಮಹಾವಿದ್ಯಾಲಯಗಳ 2024-25 ನೇ ಸಾಲೀನ 18ನೇ ಅಥ್ಲೇಟಿಕ್ಸ್ ಕ್ರೀಡಾಕೂಟ ದಿನಾಂಕ 20ರಿಂದ 22 ವರೆಗೆ ಹಮ್ಮಿಕೊಳ್ಳಲಾಗಿತ್ತು. ಈ ಕ್ರೀಡಾಕೂಟದಲ್ಲಿ ವಿದ್ಯಾರ್ಥಿನಿ ಲಕ್ಷ್ಮೀ ಕಮತಗಿ 200 ಹಾಗೂ 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನಗಳಿಸಿ ಚಿನ್ನದ ಪದಕ ಮುಡಿಗೇರಿಸಿಕೊಂಡು ದಾಖಲೆ ಮಾಡಿದ್ದಾಳೆ, ಜೋತಗೆ 20ಕಿ.ಮೀ ನಡೆಗೆಯಲ್ಲಿ ವಿದ್ಯಾರ್ಥಿನಿ ಸುಶ್ಮೀತಾ ಬಡಿಗೇರ ದ್ವಿತೀಯ ಸ್ಥಾನಗಳಿಸಿ ನೂತನ ದಾಖಲೆ ನಿರ್ಮಿಸುವ ಮೂಲಕ ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕೀರ್ತಿ ತಂದಿದ್ದಾರೆ,

ಈ ಕ್ರೀಡಾಪಟುಗಳಿಗೆ ಹಾಗೂ ತರಬೇತಿ ನೀಡಿದ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಸುನೀಲ ನಡಕಟ್ಟಿ ಅವರುಗಳಿಗೆ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಹಾಗೂ ಶಾಸಕರಾದ ಎಚ್.ವಾಯ್.ಮೇಟಿ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಎನ್.ಪಟ್ಟಣಶೆಟ್ಟಿ, ಹಾಗೂ ಸರ್ವ ಸಿಬ್ಬಂದಿ ವರ್ಗ ಈ ವಿದ್ಯಾರ್ಥಿಗಳಿಗೆ ಅಭಿನಂಧನೆಗಳನ್ನು ಸಲ್ಲಿಸಿದ್ದಾರೆ.

# ಅಟ್ಟೂರು ವರ್ತಕರ ಸಂಘದ ವತಿಯಿಂದ ಅದ್ದೂರಿ ಕನ್ನಡ ರಾಜ್ಯೋತ್ಸವ



**ಯಲಹಂಕ :** ಅಟ್ಟೂರು ಬಡಾವಣೆಯ ವರ್ತಕರ ಸಂಘದ ವತಿಯಿಂದ 7ನೇ ವರ್ಷದ ಅದ್ದೂರಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಸಾಯಿ ಪ್ರಶಾಂತಿ ವೃದ್ಧಾಶ್ರಮದ ಕಿರಣ್ ಕುಮಾರ್ ದಂಪತಿಗಳ ಸಮಾಜ ಸೇವೆಯನ್ನು ಗುರುತಿಸಿ 'ವರ್ಷದ ಕನ್ನಡಿಗ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು 'ನನ್ನ ಸೇವೆಯನ್ನು ಗುರುತಿಸಿ ಗೌರವಿಸಿರುವ ನಿಮಗೆಲ್ಲ ನಾನು ಚಿರಋಣಿ' ಎಂದರು. ಹಾಗೆಯೇ ಸಿ ಆರ್ ಪಿ ಎಫ್ ಮಾಜಿ ಸೈನಿಕರಾದ ಸೀತೆಗೌಡರವರಿಗೂ 'ವರ್ಷದ ಕನ್ನಡಿಗ' ಪ್ರಶಸ್ತಿಯೊಂದಿಗೆ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು 'ಕನ್ನಡ ಭಾಷೆಯನ್ನು ನಾವೆಲ್ಲ ಉಳಿಸಿ ಬೆಳೆಸಬೇಕು' ಎಂದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಲೇಖಕ ಚಿಂತಕ ಅಂಕಣಕಾರ ಮಣ್ಣೆ ಮೋಹನ್ ರವರು ಕರುನಾಡಿನ ಭೌತಿಕ ವಿಸ್ತೀರ್ಣವನ್ನು ಕಾವೇರಿಯಿಂದ ಗೋದಾವರಿ ತೀರದವರಿಗೆ, ನಂತರ ನರ್ಮದಾ ನದಿಯ ತೀರದವರೆಗೆ, ಆನಂತರ ಗಂಗಾ ನದಿಯ ತೀರದವರಿಗೆ ಮತ್ತು ಕಾಳಿ ಗಂಡಕಿ ನದಿಯ ತೀರದವರೆಗೂ ವಿಸ್ತರಿಸಿದ್ದ ಕನ್ನಡ ರಾಜವಂಶಗಳ ಶೌರ್ಯ ಸಾಮರ್ಥ್ಯದ ಬಗ್ಗೆ ತಿಳಿಸಿದರು. ಎಂಟು ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಕನ್ನಡದ ಸಾಹಿತ್ಯ ಶ್ರೀಮಂತಿಕೆಯ ಬಗ್ಗೆ, ವಿಜಯನಗರ ಸಾಮ್ರಾಜ್ಯದ ಹೆಗ್ಗಳಿಕೆಯ ಬಗ್ಗೆ, ಜಗದ್ವಿಖ್ಯಾತ ಇಂಜಿನಿಯರ್ ವಿಶ್ವೇಶ್ವರಯ್ಯನವರ ಕೊಡುಗೆಯ ಬಗ್ಗೆ ನಿವೃತ್ತ ಶಿಕ್ಷಕ ಗಂಗಾಧರಯ್ಯ ತಿಳಿಸಿದರು. ಬದುಕು ಕಟ್ಟಿಕೊಳ್ಳಲು ಉತ್ತರ ಭಾರತದಿಂದ ಬಂದು ಅನೇಕರು ಇಲ್ಲಿ ವಾಸವಾಗಿದ್ದೀರಿ. ಕನ್ನಡ ನಾಡಿನಲ್ಲಿ ವಾಸಿಸುತ್ತಿರುವವರೆಲ್ಲರೂ ಕನ್ನಡಿಗರು. ಮಾನವೀಯ ಮೌಲ್ಯಗಳು ನಮ್ಮದಾಗಬೇಕು. ನಮ್ಮ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸದೆ ನಾವೆಲ್ಲರೂ ಅವರನ್ನು ಗೌರವಿಸಬೇಕು ಎಂದು ಗುರುರಾಜ ರಾವ್ ತಿಳಿಸಿದರು. ಧ್ವಜಾರೋಹಣ ನೆರವೇರಿಸಿ, ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀನಿವಾಸ್ ರವರು ಕನ್ನಡ ರಾಜ್ಯೋತ್ಸವದ ಹೆಗ್ಗಳಿಕೆಯನ್ನು ವಿವರಿಸುತ್ತಾ, ಕಾರ್ಯಕ್ರಮವನ್ನು ನಿರೂಪಿಸುತ್ತಾ, ಎಲ್ಲರಿಗೂ ಸ್ವಾಗತವನ್ನು ಕೋರಿದರು. ಡಾ. ವೇಣುಗೋಪಾಲ್ ಅವರು ಗಣ್ಯರನ್ನು ಸನ್ಮಾನಿಸಿ, ವಂದನಾರ್ಪಣೆ ನೆರವೇರಿಸಿದರು. ನೈಜೀರಿಯಾ ಪ್ರಜೆ ರೋಬೋ ರವರು 'ಕಾಣದಂತೆ ಮಾಯವಾದನು ನಮ್ಮ ಶಿವ ಕೈಲಾಸ ಸೇರಿಕೊಂಡನು' ಎಂಬ ಪುನೀತ್ ರಾಜಕುಮಾರ್ ಹಾಡನ್ನು ಸುಸ್ಪಷ್ಟವಾಗಿ ಹಾಡಿ ಎಲ್ಲರ ಮನಗೆದ್ದರು. ಅಧ್ಯಕ್ಷರಾದ ಗೋಪಾಲ್ ಜೈನ್, ಕಾರ್ಯದರ್ಶಿ ಶ್ರೀನಿವಾಸ್ ಎಸ್, ಖಜಾಂಚಿ ಜಗದೀಶ್, ಮಹೇಶ್, ವಿಜಯ್, ಅಜೀತ್, ಉಮೇಶ್, ಕಿರಣ್, ಶ್ರೀಕಾಂತ್, ಸುಂದರಣ್ಣ, ಅನೀಲ್ ಕುಮಾರ್, ಗಿರೀಶ್( ಕರಣ್), ಧರ್ಮಾರಾಮ್ ಜೀ, ವಿಜಯಾನಂದ ಮತ್ತು ಇತರೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದ ನಂತರ ಪ್ರಸಾದ ವಿತರಿಸಲಾಯಿತು.

**ವರದಿ: ಮಣ್ಣೆ ಮೋಹನ್**

# ಯುವಕರು ದೇಶದ ಆಸ್ತಿ, ಮೊಬೈಲ್‌ನಲ್ಲಿ ಮುಳುಗದಿರಿ-ಡಿ.ಡಿ.ಪಿ.ಯು. ಸೋಮಶೇಖರ್ ಹೊಕ್ರಾಣಿ



**ಮಾನವಿ :** ನಾವು ಕನಸು ಕಟ್ಟಿದ್ದು ಯುವಕರು ನಮ್ಮ ದೇಶ ಕಟ್ಟುವ ಶಿಲ್ಪಿಗಳಾಗುತ್ತಾರೆ. ನಮ್ಮ ಆಸ್ತಿ ಇಲ್ಲಿನ ಖನಿಜ ಸಂಪನ್ಮೂಲ ಇರಬಹುದು. ದೊಡ್ಡ ಆಸ್ತಿ ಎಂದರೆ ನಮ್ಮ ಯುವಕರು. ಯುವಕರೇ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಅಮೂಲ್ಯ ಜೀವನ ಹಾಳು ಮಾಡಿಕೊಳ್ಳಬಾರದು. ಯಾವುದೋ ಕ್ಷಣಿಕ ಸುಖಕ್ಕಾಗಿ ತಮ್ಮ ಭವಿಷ್ಯ ಕೊನೆಗೊಳಿಸಬಾರದು.

ರಾಯಚೂರು ಜಿಲ್ಲೆ ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ತೆಗೆದು ಹಾಕಲಿಕ್ಕೆ ನಿಮ್ಮ ಶ್ರಮ ಅವಶ್ಯ. ಯುವಕರಿಗೆ ದುಶ್ಚಟಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಬೇಕು ಎಂದು ಕಾಲೇಜಿಗೆ ಭೇಟಿ ನೀಡಿದ ರಾಯಚೂರು ಜಿಲ್ಲೆಯ ಪದವಿ ಪೂರ್ವ ( ಶಾಲಾ ಶಿಕ್ಷಣ ) ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರ ಹೊಕ್ರಾಣಿ ಕರೆ ಕೊಟ್ಟರು.

ಮಾನವಿ ಪಟ್ಟಣದ ಸರಕಾರಿ ಪದವಿ ಪೂರ್ವ ಬಾಲಕರ ಕಾಲೇಜಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮ ಇತ್ತೀಚೆಗೆ ಜರುಗಿತು.

ವಿಶೇಷ ಉಪನ್ಯಾಸದಲ್ಲಿ ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪುರ ಮಾತನಾಡುತ್ತಾ "ಗುರಿಯತ್ತಾ ನಿಮ್ಮ ಚಿತ್ತವಿರಲಿ, ವಿದ್ಯಾರ್ಥಿ ಜೀವನ ಗೋಲ್ಡ್ ಅಲ್ಲ.

ಇಲ್ಲಿ ಚನ್ನಾಗಿ ರೂಪಿಸಿಕೊಂಡು ಮುಂದೆ ಚಟಗಳು ಗೆಳೆಯರಿಂದ ಆರಂಭವಾಗಿ ಚಟ್ಟಕ್ಕೆ ಕೊನೆಗೊಳ್ಳುತ್ತದೆ. ಇಲ್ಲಿ ಚನ್ನಾಗಿ ಬಳಸಿ, ಸ್ವೀಕರಿಸಿ, ಅನುಭವ ಪಡೆದರೆ ಮುಂದಿನ ಜೀವನ ಬಂಗಾರವಾಗಲು ಸಾಧ್ಯ.

ಇಲ್ಲಿ ಬಂಗಾರ ಮಾಡಿಕೊಂಡು ಎಂಜಾಯ್ ಮೋಜು ಮಸ್ತಿ ಮಾಡಿದರೆ ಮುಂದೆ ಮುಪ್ಪಿನ ವಯಸ್ಸಿನಲ್ಲಿ ಶ್ರಮ ಪಡಬೇಕಾಗುತ್ತದೆ. ಹಾಗಾಗಬಾರದೆಂದರೆ ನಾವು ಇವತ್ತು ಶ್ರಮವಹಿಸಬೇಕು, ಸಾಧಿಸಬೇಕು. ಬದುಕು ರೂಪಿಸಿಕೊಳ್ಳಬೇಕು. ಗುಟ್ಕಾ, ಮಟ್ಕಾ, ಧೂಮಪಾನ, ಮದ್ಯಪಾನ ತಂಬಾಕಿಗೆ ಬಲಿಯಾಗಬೇಡಿ. ಆರೋಗ್ಯ ಬರಿ ಭಾಗ್ಯವಲ್ಲ, ಮಹಾಭಾಗ್ಯ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ. ಕುಂಟೆಪ್ಪ ಗೌರಿಪುರ್, ರಾಯಚೂರಿನ ಎಲ್. ವಿ. ಡಿ. ಕಾಲೇಜಿನ ಪ್ರಾಚಾರ್ಯರಾದ ಈರೇಶ್, ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಬಸವರಾಜ್, ಉಪನ್ಯಾಸಕ ಅಬ್ದುಲ್, ಸತೀಶ್, ವಲಯ ಮೇಲ್ವಿಚಾರಕಿ ಸುನಂದಾ, ಸೇವಾ ಪ್ರತಿನಿಧಿ ಮೆಹೆಬೂಬ್ ಮಾನ್ವಿ, ಈಶ್ವರಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ತೇರದಾಳ ಪುರಸಭೆಯ ಸಾಮಾನ್ಯ ಸಭೆ

## ತೇರದಾಳದಲ್ಲಿ ಮಾಸ್ಟರ್ ಪ್ಲ್ಯಾನ್ಗೆ ಠರಾವು!



**ತೇರದಾಳ :** ಇಲ್ಲಿಯ ಪುರಸಭೆ ವ್ಯಾಪ್ತಿಯಲ್ಲಿ ಮೂಲ ಆಸ್ತಿಗಿಂತ ಹೆಚ್ಚುವರಿಯಾಗಿ ಅತಿಕ್ರಮಣ ಮಾಡಿದ ಸ್ಥಳವನ್ನು ತೆರವುಗೊಳಿಸಲು ಮಾಸ್ಟರ್ ಪ್ಲ್ಯಾನ್ ತಯಾರಿಸಿ ಕ್ರಮ ಕೈಗೊಳ್ಳಲು ಪುರಸಭೆ ಸದಸ್ಯರು ಸೋಮವಾರ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಒಪ್ಪಿಗೆ ನೀಡಿ ಠರಾವು ಮಾಡಿದರು.

ಸಭೆಯ ಅಜೆಂಡಾ ಪ್ರಕಾರ ಒಂಭತ್ತನೇ ವಿಷಯದಂತೆ ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ ವಿಷಯ ಮಂಡಿಸಿದರು. ಸದಸ್ಯರುಗಳಾದ ಶೆಟ್ಟೆಪ್ಪ ಸುಣಗಾರ, ಆದಿನಾಥ ಸಪ್ತಸಾಗರ ಹಾಗೂ ಸುರೇಶ ಕಬಾಡಗಿ ಸಹಮತ ವ್ಯಕ್ತಪಡಿಸಿದರು. ಇದಕ್ಕೆ ಎಲ್ಲ ಸದಸ್ಯರು ಒಪ್ಪಿಗೆ ಸೂಚಿಸಿದರು.

ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಉತ್ಪಾದನೆ ಮಾಡುವ ಗೊಬ್ಬರವನ್ನು ಲಿಲಾವು ಮಾಡಲು ದರ ನಿಗದಿಗೊಳಿಸುವ ಕುರಿತು ಆರೋಗ್ಯ ನಿರೀಕ್ಷಕ ಇರ್ಫಾನ್ ಝೂರೆ ವಿಷಯ ಪ್ರಸ್ತಾಪ ಮಾಡಿದರು. ಸಾಕಷ್ಟು ಅನುದಾನ ಖರ್ಚು ಮಾಡುತ್ತಿದ್ದರೂ ಘನತ್ಯಾಜ್ಯ ವಿಲೇವಾರಿ ಘಟಕ ಹೇಗಿದೆಯೋ ಹಾಗೇ ಇದೆ. ಮೊದಲು ಸರಿಯಾಗಿ ಘಟಕ ಇಟ್ಟುಕೊಳ್ಳಿ ಎಂದು ಸುರೇಶ ಕಬಾಡಗಿ, ಶೆಟ್ಟೆಪ್ಪ ಸುಣಗಾರ ಸೂಚನೆ ನೀಡಿದರು. ಪುರಸಭೆ ಆಸ್ತಿ ತೆರಿಗೆ ವಸೂಲಾತಿಗೆ ಮಹಿಳಾ ಸ್ವ-ಸಹಾಯ ಸಂಘಗಳನ್ನು ನೇಮಿಸಿಕೊಳ್ಳುವಂತೆ ಸರಕಾರದ ನಿರ್ದೇಶನ ಇದೆ. ಈಗಾಗಲೇ ಒಂದು ಮಹಿಳಾ ಸಂಘ ಅರ್ಜಿ ನೀಡಿದೆ. ತೆರಿಗೆ ವಸೂಲಾತಿ ಆಧಾರದ ಮೇಲೆ ಸಂಘಗಳಿಗೆ ಕಮಿಷನ್ ನೀಡಲಾಗುತ್ತದೆ ಎಂದು ವ್ಯವಸ್ಥಾಪಕ ಮಲ್ಲಿಕಾರ್ಜುನ ಸಭೆಗೆ ಮಾಹಿತಿ ನೀಡಿದರು. ಬಹಳ ದಿನಗಳಿಂದ ಬಾಕಿ ಉಳಿಸಿಕೊಂಡಿರುವ ವಸೂಲಿಗೆ ನೇಮಿಸಿಕೊಳ್ಳಲು ಸದಸ್ಯರು ಸಲಹೆ ನೀಡಿದರು. 2021 ರಲ್ಲಿ 21 ನಿವೃತ್ತ ದೇವದಾಸಿಯರಿಗೆ ನಿವೇಶನ ನೀಡಲು ಆದೇಶವಾಗಿದೆ. ಆದರೆ ಈ ಪೈಕಿ ಕೇವಲ ಆರು ಜನ ದೇವದಾಸಿಯರು ಮಾತ್ರ ಅರ್ಹರಿದ್ದು , ಇನ್ನುಳಿದವುಗಳಿಗೆ ಮರು ಆಯ್ಕೆಗೆ ಶಿಫಾರಸ್ಸು ಮಾಡುವ ಕುರಿತು ಸಭೆಯ ಅನುಮೋದನೆ ಪಡೆಯಲಾಯಿತು. ಕಟ್ಟಡ ಪರವಾನಗಿ ಹಾಗೂ ಜಾಹಿರಾತು ದರ ಪರಿಷ್ಕರಣೆಗೆ ಸಭೆಯ ಒಪ್ಪಿಗೆ ಪಡೆಯಲಾಯಿತು. ಹಲವು ಕಾಮಗಾರಿಗಳ ಟೆಂಡರ್ ಹಾಗೂ ಮರು ಟೆಂಡರ್ ಕಾಮಗಾರಿಗಳ ಬದಲಾವಣೆ ಕುರಿತು ಸಭೆಯಲ್ಲಿ ಠರಾವು ಮಾಡಲಾಯಿತು. ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ನಸ್ರೀನ್ ಬಾನು ನಗಾರ್ಜಿ, ಸ್ಥಾಯಿ ಸಮಿತಿ ಚೇರಮನ್ ಕುಮಾರ ಸರಿಕರ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಪಜಲ್ ಅತಾರಾವುತ್, ಪೈಯಾಜ್ ಇನಾಮದಾರ, ಮಹಾದೇವಿ ಗಸ್ತಿ, ಅಕ್ಕುತಾಯಿ ಕಾಂಬಳೆ, ರುಸ್ತುಂ ನಿಪ್ಪಾಣಿ, ಎಫ್. ಬಿ. ಗಿಡ್ಡಿ, ಅಭಿಯಂತರಿಣಿ ಭಾಗ್ಯಶ್ರೀ ಪಾಟೀಲ, ಪ್ರತಾಪ ಕೊಡಗೆ, ಭರಮು ಧನಗರ, ಸದಾಶಿವ ತೆಳಗಿನಮನಿ ಹಾಜರಿದ್ದರು.

ಏಳು ಜನ ಸದಸ್ಯರು ಗೈರು !- ಸಾಮಾನ್ಯ ಸಭೆ ಪ್ರಾರಂಭಗೊಂಡು ಒಂದು ಗಂಟೆಯಾದರೂ ಬಿಜೆಪಿಯ ಹತ್ತು ಸದಸ್ಯರ ಪೈಕಿ ಒಬ್ಬರೂ ಸದಸ್ಯರು ಸಭೆಗೆ ಆಗಮಿಸಿರಲಿಲ್ಲ. ನಂತರ ಒಬ್ಬೊಬ್ಬರಂತೆ ನಾಲ್ಕು ಜನ ಮಹಿಳಾ ಸದಸ್ಯೆಯರು ಆಗಮಿಸಿದರು. ಬಿಜೆಪಿಯ ಆರು ಹಾಗೂ ಓರ್ವ ಪಕ್ಷೇತರ ಸದಸ್ಯ ಸಾಮಾನ್ಯ ಸಭೆಗೆ ಗೈರಾಗುವ ಮೂಲಕ ಅಚ್ಚರಿಗೆ ಕಾರಣರಾದರು.

ನಾಮನಿರ್ದೇಶನ- ಪುರಸಭೆ ಆಶ್ರಯ ಕಮೀಟಿಗೆ ಸರಕಾರದಿಂದ ನಾಮನಿರ್ದೇಶನಗೊಂಡ ರಾಜು ಹೊಸಮನಿ, ತವನಪ್ಪ ಮಾಟ, ಧನಪಾಲ ಬೋದೆನ್ನವರ ಹಾಗೂ ಶಬಾನಾ ನಾಯಕವಾಡಿ ಅವರನ್ನು ಸಾಮಾನ್ಯ ಸಭೆ ಪ್ರಾರಂಭಗೊಳ್ಳುವ ಮೊದಲು ಪುರಸಭೆ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

# ಹಣಕಾಸಿನ ಹೂಡಿಕೆಯಿಂದ ದೇಶದ ಆರ್ಥಿಕ ಅಭಿವೃದ್ಧಿ



**ರಬಕವಿ-ಬನಹಟ್ಟಿ :** ಇಂದಿನ ದಿನಗಳಲ್ಲಿ ಹಣಕಾಸಿನ ಹೂಡಿಕೆಗಳಲ್ಲಿ ಜಾಗೃತಿ ಬಹಳಷ್ಟು ಮುಖ್ಯವಾಗಿದೆ. ನಮ್ಮ ದೇಶದ ಜನರು ಕೇವಲ ಸಾಂಪ್ರದಾಯಿಕ ಹಣಕಾಸಿನ ಹೂಡಿಕೆಯಲ್ಲಿ ಮಾತ್ರ ತೊಡಗಿದ್ದಾರೆ. ವಿದ್ಯಾವಂತರಲ್ಲಿಯೂ ಕೂಡಾ ಆಧುನಿಕ ಹಣಕಾಸಿನ ಹೂಡಿಕೆಯ ಜಾಗೃತಿ ಅಗತ್ಯವಾಗಿದೆ ಎಂದು ಜಮಖಂಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕ ಎಸ್. ಪಿ. ಸಜ್ಜನ ತಿಳಿಸಿದರು.

ಅವರು ಸೋಮವಾರ ಸ್ಥಳೀಯ ಎಸ್. ಟಿ. ಸಿ. ಕಾಲೇಜಿನಲ್ಲಿ ನಡೆದ ಲೈವ ಟ್ರೇಡಿಂಗ್ ಇನ್ ಸ್ಟಾಕ್ ಮಾರ್ಕೆಟ್ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಾಗತಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಕಂಪನಿಗಳಲ್ಲಿ ಹೂಡಿಕೆಯನ್ನು ಮಾಡಬೇಕು. ಸೂಕ್ತವಾದ ಕಂಪನಿಗಳಲ್ಲಿ ಹೂಡಿಕೆಯನ್ನು ಮಾಡುವುದರಿಂದ ದೇಶವು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತದೆ. ದೇಶದ ಆರ್ಥಿಕ ಅಭಿವೃದ್ಧಿಯಿಂದ ಉದ್ದಿಮೆಗಳು ಹೆಚ್ಚುತ್ತವೆ. ಇದರಿಂದ ಉದ್ಯೋಗಗಳು ಹೆಚ್ಚಾಗುತ್ತವೆ. ಉದ್ಯೋಗಾವಕಾಶಗಳ ಹೆಚ್ಚಳದಿಂದಾಗಿ ದೇಶದ ಜನರ ಜೀವನ ಮಟ್ಟ ಹೆಚ್ಚಾಗುತ್ತದೆ ಎಂದು ಸಜ್ಜನ ತಿಳಿಸಿದರು.

ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ಮಾತನಾಡಿ, ಕಾಲೇಜುಗಳಲ್ಲಿ ನಡೆಯುವ ವಿಶೇಷ ಉಪನ್ಯಾಸಗಳ ಸದ್ಬಳಕೆಯನ್ನು ವಿದ್ಯಾರ್ಥಿಗಳು ಮಾಡಿಕೊಳ್ಳಬೇಕು. ಇಂತಹ ವಿಶೇಷ ಉಪನ್ಯಾಸಗಳು ನಮ್ಮಲ್ಲಿಯ ಜ್ಞಾನವನ್ನು ಹೆಚ್ಚಿಸುತ್ತವೆ ಎಂದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಗೀತಾ ಸಜ್ಜನ, ಐಕ್ಯೂಎಸ್ಸಿ ಸಂಯೋಜಕ ಪ್ರಕಾಶ ಕೆಂಗನಾಳ, ಸುವರ್ಣಾ ವರದಾಯಿ, ಶ್ವೇತಾ ಮಠದ, ವಿಶ್ವಜ ಕಾಡದೇವರ, ಲಕ್ಷ್ಮಿ ಮಗದುಮ, ಕೀರ್ತಿ ಆಳಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಮಕ್ಕಳು ಪ್ರತಿಭೆಗಳ ಸಂಗಮ: ಸಮ್ಮೇಳನ ಅದ್ಭುತ ವೇದಿಕೆ



**ರಬಕವಿ-ಬನಹಟ್ಟಿ :** ಮಕ್ಕಳು ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ಎಲ್ಲ ಪ್ರತಿಭೆಗಳ ಸಂಗಮವಾಗಿದ್ದಾರೆ. ಮಕ್ಕಳ ಸಾಹಿತ್ಯ ಸಮ್ಮೇಳನ ಮಕ್ಕಳ ಪ್ರತಿಭಾ ಅನಾವರಣಕ್ಕೆ ಅದ್ಭುತ ವೇದಿಕೆ ಅಹುದು ಎಂದು ಜಮಖಂಡಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ಅಭಿಪ್ರಾಯ ಪಟ್ಟರು.

ರಾಮಪುರದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯಲ್ಲಿ ಜರುಗಿದ ರಬಕವಿ ಬನಹಟ್ಟಿ ತಾಲೂಕಿನ ಎರಡನೇ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡುತ್ತಿದ್ದರು.

ಪ್ರತಿಯೊಂದು ಮಗು ಅದ್ಭುತ ಪ್ರತಿಭೆಗಳ ಕಣಜವಾಗಿದ್ದು, ಅದನ್ನು ಹೊರಗೆ ಹೆಕ್ಕಿ ತೆಗೆಯುವ ಪ್ರಯತ್ನವನ್ನು ಪಾಲಕರು, ಪೋಷಕರು ಮತ್ತು ಶಿಕ್ಷಕರು ಮಾಡಬೇಕು. ಅಂತಹ ಪ್ರಯತ್ನದಲ್ಲಿ ಮಕ್ಕಳ ಸಾಹಿತ್ಯ ಸಮ್ಮೇಳನ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಎಂದು ತಿಳಿಸಿದರು.

ಹಿರಿಯ ಸಾಹಿತಿ ಸಿದ್ದರಾಜ ಪೂಜಾರಿ ಮಾತನಾಡಿ, ಮಕ್ಕಳ ಸಾಹಿತ್ಯಕ್ಕೆ ರಬಕವಿ ಬನಹಟ್ಟಿ ತಾಲೂಕು ಅಪಾರ ಕೊಡುಗೆ ನೀಡಿದ್ದು ಮಕ್ಕಳ ಕವಿ ಜಯವಂತ ಕಾಡದೇವರ ಅವರ ಕೊಡುಗೆ ಅಪಾರ ಎಂದರು.

ಮಾಧವನ್ ಭಂಡಾರಿ, ಲೋಕೇಶ್ ಹಂಜಗಿ, ಪಂಚಾಕ್ಷರಿ ನಂದೇಶ, ಸುಭಾಷ್ ಹಟ್ಟಿ, ಭೀಮು ಕಲ್ಲೋಳಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವರ್ಷಾ ಮಗದುಮ ಮತ್ತು ಸಂಭ್ರಮ ಯರಗಾವಿ ನಿರೂಪಿಸಿದರು. ಗೊಡಚೆಪ್ಪ ಸೋಗಿನವರ ಸ್ವಾಗತಿಸಿದರು. ಜಿ. ಎಸ್. ಕಲಬುರ್ಗಿ ವಂದಿಸಿದರು. ಶ್ರೀಶೈಲ್ ಬುರ್ಲಿ, ಭೀಮಪ್ಪ ಹಳೆಮನೆ, ಆರ್. ವಿ. ಲಮಾಣಿ ಉಪಸ್ಥಿತರಿದ್ದರು.

# ಉತ್ತರ ಕರ್ನಾಟಕದ ಕನ್ನಡ ಭಾಷೆಯ ಸೊಗಡು ಶ್ರೇಷ್ಠವಾದದ್ದು



**ರಬಕವಿ-ಬನಹಟ್ಟಿ :** ಕನ್ನಡ ಭಾಷೆಯ ನಿಜವಾದ ಶ್ರೀಮಂತಿಕೆ ಇರುವುದು ಗ್ರಾಮೀಣ ಜನರ ಆಡು ಭಾಷೆಯಲ್ಲಿ ಎಂದು ಸಮೀಪದ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕ ಮಠದ ದಾನೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ಎಸ್. ಆರ್. ಎ. ಮೈದಾನದಲ್ಲಿ ಕನ್ನಡ ಸಂಘದವರು ಹಮ್ಮಿಕೊಂಡ ನೇಕಾರಿ ನಗರಿಯಲ್ಲಿ ಕನ್ನಡದ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಉತ್ತರ ಕರ್ನಾಟಕದ ಭಾಷೆಯ ಸೊಗಡು ಶ್ರೇಷ್ಠವಾದುದು. ಅದು ಇತ್ತೀಚೆಗೆ ನಾಟಕ, ಕಿರುತೆರೆ ಧಾರಾವಾಹಿ, ಸಿನೇಮಾಗಳ ಮೂಲಕ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ನಮ್ಮ ಭಾಷೆಯ ನೈಜತೆಯನ್ನು ಕಾಪಾಡಿಕೊಳ್ಳಬೇಕು ಎಂದು ಅನ್ನದಾನೇಶ್ವರ ಸ್ವಾಮೀಜಿ ತಿಳಿಸಿದರು.

ಮಕ್ಕಳ ಸಾಹಿತಿ ಜಯವಂತ ಕಾಡದೇವರ ಮಾತನಾಡಿ, ಕನ್ನಡ ಭಾಷೆ, ನೆಲ ಜಲಕ್ಕೆ ತಾಯಿಯಷ್ಟೇ ಗೌರವವನ್ನು ನೀಡಬೇಕು. ಕಾಂಗ್ರೆಸ್ ಪಕ್ಷದ ಧುರೀಣ ಸಿದ್ದು ಕೊಣ್ಣೂರ ಮಾತನಾಡಿ, ಕನ್ನಡ ಭಾಷೆಯ ಕುರಿತು ಬೃಹತ್ ಕಾರ್ಯಕ್ರಮಗಳು ನಡೆಯುತ್ತಿರುವುದು ಅಭಿಮಾನದ ಸಂಗತಿಯಾಗಿದೆ ಎಂದರು.

ಸಂಘದ ಸಂಸ್ಥಾಪಕ ಶಿವಲಿಂಗ ಗೊಂಬಿಗುಡ್ಡ ಮಾತನಾಡಿ, ಕನ್ನಡ ನಾಡಿನಲ್ಲಿ ಜನಿಸಿದ ಪ್ರತಿಯೊಬ್ಬರು ಕನ್ನಡಭಾಷೆಯನ್ನುಪ್ರೀತಿಸಬೇಕು. ನಾಡು ನುಡಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಯುವ ಸಂಭ್ರಮ 2024 ಕಾರ್ಯಕ್ರಮ ಉದ್ಘಾಟನೆಗೊಂಡಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಇಪ್ಪತ್ತಕ್ಕೂ ಹೆಚ್ಚು ಅಧಿಕ ತಂಡಗಳ ಕಲಾವಿದರಿಂದ ನೃತ್ಯ ಕಾರ್ಯಕ್ರಮ ನಡೆಯಿತು. ಕೋರ್ ಕನ್ನಡ ಚಲನಚಿತ್ರದ ಮೇಕಿಂಗ್ ವಿಡಿಯೋ ಮತ್ತು ಧ್ವನಿ ಸುರಳಿ ಬಿಡುಗಡೆ ಸಮಾರಂಭ ನಡೆಯಿತು.

ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು, ತಿಮ್ಮಾಪುರ, ಪ್ರಕಾಶ ದೇಸಾಯಿ, ಶ್ರೀಶೈಲ ಧಬಾಡಿ, ನಿಲೇಶ ದೇಸಾಯಿ, ಮಲ್ಲಿಕಾರ್ಜುನ ಬಾಣಕಾರ, ಧರೆಪ್ಪ ಸಾಂಗ್ಲಿಕರ್, ರಂಜಾನ್ ದಿಗ್ಗೇವಾಡಿ, ಡಾ. ಎ. ಆರ್. ಬೆಳಗಲಿ, ಕೃಷ್ಣಾ ಲೆಂಡಿ, ಸಂಜಯ ತೆಗ್ಗಿ, ಸಿದ್ದುಗೌಡ ಪಾಟೀಲ, ಶಿವು ಕಾಂಬಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬುಡುಕಟ್ಟು ಜನಾಂಗದ ಅರಿವು ಅಗತ್ಯ



**ರಬಕವಿ-ಬನಹಟ್ಟಿ :** ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬುಡುಕಟ್ಟು ಜನಾಂಗದವರು ಕೂಡಾ ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯ ಹೋರಾಟ ನಡೆಸಿದ್ದರು. ಅವರಲ್ಲಿ ಪ್ರಮುಖರಾದವರು ಬಿಸ್ರಾ ಮುಂಡಾ. ಕೇವಲ 25 ವರ್ಷ ಮಾತ್ರ ಬದುಕಿದ್ದ ಮುಂಡಾ ಅವರ ದೇಶಾಭಿಮಾನವನ್ನು ಇಂದಿನ ಯುವಕರು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂದು ಸಮೀಪದ ಜಗದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಆನಂದ ಶಿಂಧೆ ತಿಳಿಸಿದರು.

ಅವರು ಶನಿವಾರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಡುಕಟ್ಟು ಜನಾಂಗದ ಸ್ವಾತಂತ್ರ್ಯ ಹೋರಾಟಗಾರ ಬಿಸ್ರಾ ಮುಂಡಾ ಅವರ 150 ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಕಿ ಮಂಜುಳಾ ಹೂಗಾರ ಮಾತನಾಡಿ, ಇಂದಿನ ಮಕ್ಕಳಿಗೆ ಆದಿವಾಸಿ ಮತ್ತು ಬುಡುಕಟ್ಟು ಜನಾಂಗದ ಕುರಿತು ಅರಿವು ಮೂಡಿಸುವ ಕೆಲಸ ಮುಖ್ಯವಾಗಿ ಆಗಬೇಕಾಗಿದೆ. ಅವರ ನಡೆ ನುಡಿಗಳು, ಆಚಾರ ವಿಚಾರಗಳ ಕುರಿತು ತಿಳಿಸಬೇಕಾಗಿದೆ ಎಂದು ತಿಳಿಸಿದರು.

ಹಲವಾರು ವಿದ್ಯಾರ್ಥಿಗಳು ಬುಡುಕಟ್ಟು ಜನಾಂಗದ ಛದ್ಮ ವೇಷಧಾರಿಗಳಾಗಿ ಗಮನ ಸೆಳೆದರು.

ಶಿಕ್ಷಕರಾದ ಸಿ. ವಿ. ಕುಲಕರ್ಣಿ, ಎಸ್. ಎಸ್. ಬುಗಟ್ಯಾಗೋಳ, ಸುವರ್ಣಾ ವಾಲಿ, ದಿಲವರ್ ನಾಯಕ, ಜ್ಯೋತಿ ಮುಂಡಗನೂರ, ಸಕ್ಕುಬಾಯಿ ಪವಾರ, ವಿನಾಯಕ ಪೂಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಗ್ರಾ.ಪಂ. ಉಪಾಧ್ಯಕ್ಷೆಗೆ ಶಾಸಕರಿಂದ ಸನ್ಮಾನ



**ಚಿಮ್ಮಡ :** ಇಲ್ಲಿಯ ಗ್ರಾಮ ಪಂಚಾಯತಿಗೆ ಉಪಾಧ್ಯಕ್ಷೆಯಾಗಿ ನೂತನವಾಗಿ ಆಯ್ಕೆಯಾದ ಶ್ರೀಮತಿ ಪದ್ಮಾವತಿ ಪ್ರಭು ಭಜಂತ್ರಿಯವರನ್ನು ತೇರದಾಳ ಶಾಸಕ ಸಿದ್ದು ಸವದಿ ಶನಿವಾರ ಸತ್ಕರಿಸಿ ಗೌರವಿಸಿದರು. ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಪ್ರಭು ನೇಸೂರ, ಬೀರಪ್ಪಾ ಹಳೇಮನಿ, ಬಸವರಾಜ ಕುಂಚನೂರ, ಆನಂದ ಕಂಪು , ಪ್ರಕಾಶ ಪಾಟೀಲ, ಪ್ರಭು ಮುಧೋಳ, ಆನಂದ ಕವಟಿ, ಮನೋಜ ಹಟ್ಟಿ, ಹಣಮಂತ ಭಜಂತ್ರಿ, ತುಕಾರಾಮ ದೊಡಮನಿ ಸೇರಿದಂತೆ ಹಲವಾರು ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನೂತನ ಬೊರವೆಲ್ಗೆ ಶಾಸಕರಿಂದ ಪೂಜೆ

**ಚಿಮ್ಮಡ :** ಇಲ್ಲಿಯ ಬಳಗಾರ ಕ್ರಾಸ್ ಬಳಿ ರಬಕವಿ ಮಹಾಲಿಂಗಪುರ ಹೆದ್ದಾರಿಗೆ ಹೊಂದಿಕೊಂಡಿರುವ ಕರೆವ್ವ ದೇವಿ ದೇವಸ್ಥಾನದ ಬಳಿ ಕುಡಿಯುವ ನೀರಿಗಾಗಿ ಕೊರೆಸಲಾಗಿರುವ ಬೊರವೆಲ್ಗೆ ಶಾಸಕ ಸಿದ್ದು ಸವದಿ ವಿಶೇಷ ಪೂಜೆ ಸಲ್ಲಿಸಿದರು.

ಜಲ ಜೀವನ್ ಮಿಷನ್ ಯೋಜನೆಯಡಿ ಈ ಭಾಗದ ಸುಮಾರು ಎಪ್ಪತ್ತು ಹೊಲ ಮನೆಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆಗೆ ಕೊಳವೆ ಬಾವಿ ಕೊರೆಸಲಾಯಿತು.



ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಪರಪ್ಪಾ ಪಾಲಭಾಂವಿ, ಪ್ರಭು ನೇಸೂರ, ಬೀರಪ್ಪಾ ಹಳೇಮನಿ, ಬಸವರಾಜ ಕುಂಚನೂರ, ಪ್ರಕಾಶ ಪಾಟೀಲ, ಪ್ರಭು ಮುಧೋಳ, ಆನಂದ ಕವಟಿ, ಮನೋಜ ಹಟ್ಟಿ, ಪೈಗಂಬರ ಮೊಪಗಾರ, ಹಣಮಂತ ಭಜಂತ್ರಿ, ನಾಗಪ್ಪಾ ಆಲಕನೂರ, ತುಕಾರಾಮ ದೊಡಮನಿ ಸೇರಿದಂತೆ ಹಲವಾರು ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಿಎಂಡಿ; 24-02 ಚಿಮ್ಮಡ ಗ್ರಾಮದಲ್ಲಿ ಶ್ರೀ ಕರೆವ್ವದೇವಿ ದೇವಸ್ಥಾನದ ಬಳಿ ಕೊರೆಸಲಾಗಿರುವ ನೂತನ ಬೊರವೆಲ್ಗೆ ಶಾಸಕರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು.

# ರೈತನೇ ಎರಡನೆಯ ಪರಮಾತ್ಮ: ಸಿದ್ದಪ್ಪ ಬಿದರಿ







**ಜಮಖಂಡಿ :** ಕಟ್ಟಿದ ಮನೆ ಸಿಂಗಾರ ಕಾಣಬೇಕಾದರೆ ಮನೆಯಲ್ಲಿ ದನ, ಮಕ್ಕಳು-ಮರಿ ಇರಬೇಕು. ಎತ್ತು-ಆಕಳು ಇರುವ ಮನೆ ಧರ್ಮದ ಮನೆಯಾಗಿರುತ್ತದೆ. ಒಕ್ಕಲುತನ ಮನೆಯಲ್ಲಿ ಪರಮಾತ್ಮ ನೆಲೆಸಿರುತ್ತಾನೆ. ರೈತನೇ ಎರಡನೆಯ ಪರಮಾತ್ಮ ಎಂದು ಬೀಳಗಿಯ ಜಾನಪದ ಕಲಾವಿದ ಸಿದ್ದಪ್ಪ ಬಿದರಿ ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದಲ್ಲಿ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳು ನಾಲ್ಕನೇ ಭಾನುವಾರ ಆಯೋಜಿಸುವ ಶ್ರೀಗುರುದೇವ ಸತ್ಸಂಗ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಜಾನಪದರು ಮತ್ತು ಜಾನಪದ ಸಂಸ್ಕೃತಿ ಕುರಿತು ಮಾತನಾಡಿದರು.

ರೈತರು ತಮ್ಮ ತಂದೆ-ತಾಯಿಯರನ್ನು ವೃದ್ಧಾಶ್ರಮಕ್ಕೆ ಸೇರಿಸುವುದಿಲ್ಲ. ರೈತರ ಮಕ್ಕಳಿಗೆ ಹೆಣ್ಣು ಕೊಡಬೇಕು. 10-12 ಜಾನುವಾರು ಸಾಕುವ, ನೂರಾರು ಜನರನ್ನು ಸಲಹುವ ರೈತನಿಗೆ ತನ್ನ ಹೆಂಡತಿಯನ್ನು ಸಲುಹುದಾಗದೆ ಎಂದು ಖಾರವಾಗಿ ಪ್ರಶ್ನಿಸಿದ ಅವರು ಒಕ್ಕಲುತನಕ್ಕೆ ಒತ್ತು ಕೊಟ್ಟು ದುಡಿಯುವವರ ಮನೆ ಬಂಗಾರವಾಗುತ್ತೆ ಎಂದರು.

ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಸತ್ಯವನ್ನು ತಿಳಿಯಲು, ನನ್ನನ್ನು ನಾನು ಅರಿಯಲು, ದೇಹ ಯಾರು? ನಾನು ಯಾರು? ಎಂದು ಅರಿತುಕೊಳ್ಳಲು ಸತ್ಸಂಗ ಬೇಕು. ಜಗತ್ತು, ಜೀವ, ಪರಮಾತ್ಮ, ಜಗತ್ತಿನಲ್ಲಿರುವ ಬಂಧನ, ಮಾಯೆ ಕುರಿತು ಚಿಂತನೆ ಮಾಡಲು ಸತ್ಸಂಗ ಅಗತ್ಯ ಎಂದು ಆಶೀರ್ವಚನ ನೀಡಿದರು.

ಆತ್ಮ, ಜೀವ ಬಹಳ ಸೂಕ್ಷ್ಮವಾಗಿವೆ. ಆತ್ಮನನ್ನು ಮನಸ್ಸು ಆವರಿಸಿರುತ್ತದೆ. ಮನಸ್ಸಿಗೆ ಅದ್ಭುತ ಶಕ್ತಿಯಿದೆ. ಆದರೆ, ಮಾತು ಮನಸ್ಸನ್ನು ನಿಯಂತ್ರಿಸುತ್ತದೆ. ಮಾತಿನಂತೆ ಮನಸ್ಸು ಬದಲಾಗುತ್ತದೆ. ಹಾಗಾಗಿ ಮಾತು ಶುದ್ಧವಾದರೆ, ದೇಹ ಶುದ್ಧವಾಗುತ್ತದೆ. ಸತ್ಸಂಗದಿಂದ ಮಾತುಗಳು ಶುದ್ಧಿಯಾಗುತ್ತವೆ. ಮಾತುಗಳು ಶುದ್ಧಿಯಾದರೆ ಮನ, ಬುದ್ಧಿ, ಚಿತ್ತ ಶುದ್ಧಿಯಾಗುತ್ತವೆ ಎಂದರು.

ಮಹಾಪ್ರಸಾದದ ಸೇವೆ ಮಾಡಿದ ವಿಜಯಕುಮಾರ ಹಿರೆಸೋಮಣ್ಣವರ ದಂಪತಿ, ಜಯಕುಮಾರ ಹಿರೆಸೋಮಣ್ಣವರ ದಂಪತಿ, ಪಿಎಸ್ಐ ಹುದ್ದೆಗೆ 56ನೇ ರ್ಯಾಂಕ್‌ನೊಂದಿಗೆ ಆಯ್ಕೆಯಾಗಿರುವ ಶಿವರಾಜ ಗುರುಬಸುಗೌಡ ಪಾಟೀಲ, ತುಂಗಳ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಅಶೋಕ ತುಂಗಳ, ಡಾ.ಲಕ್ಷ್ಮೀ ತುಂಗಳ ದಂಪತಿ, ವಿಶೇಷ ಸಾಧಕ ಸಂಗಮೇಶ ಮಲಕಪ್ಪನವರ ಅವರನ್ನು ಶ್ರೀಮಠದ ಪರವಾಗಿ ಸನ್ಮಾನಿಸಲಾಯಿತು.

ಶ್ರೀಮಠದ ಸಾಧಕರಾದ ಶಾಸ್ತ್ರೀ ಇದ್ದರು. ಶ್ರೀಗುರುದೇವ ಸಂಗೀತ ಬಳಗದ ಕಲಾವಿದರಾದ ಗುರುಬಸುಗೌಡ ಪಾಟೀಲ, ಪರಮೇಶ್ವರ ತೇಲಿ, ರಮೇಶ ಬಾಡನವರ, ಪುಂಡಲೀಕ ಭಜಂತ್ರಿ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಸಂಗಮೇಶ ತೆಲಸಂಗ ನಿರೂಪಿಸಿದರು.

# ಕಥೆ ರಚನೆಗೆ ಓದಿಗಿಂತ ಅನುಭವ ಮುಖ್ಯ: ಡಾ. ಎಸ್.ಟಿ. ಮೇರವಾಡೆ

**ವಿಜಯಪುರ :** ಕಥಾ ರಚನೆಗೆ ಓದಿಕ್ಕಿಂತ ಅನುಭವ ಮುಖ್ಯವಾಗುತ್ತದೆ ಎಂದು ಡಾ. ಎಸ್.ಟಿ. ಮೇರವಾಡೆ ಹೇಳಿದರು.

ನಗರದ ಟ್ರೇಝುರಿ ಕಾಲೋನಿಯ ಬಿ.ಆರ್. ಬನ್ಸೋಡೆ ಇವರ ಸ್ವಗೃಹದಲ್ಲಿ ಓದುಗರ ಚಾವಡಿ, ರಾಜೇಂದ್ರ ಕುಮಾರ್ ಬಿರಾದಾರ ಸಾಂಸ್ಕೃತಿಕ ವೇದಿಕೆಯಿಂದ ಹಮ್ಮಿಕೊಂಡ ಮಾಸಿಕ ಪುಸ್ತಕ ಪರಿಚಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಭಾರತೀಯ ಸಾಹಿತ್ತಿಕ ಇತಿಹಾಸದಲ್ಲಿ ಕಥಾ ಪರಂಪರೆಗೆ ಸಂಬಂಧಿಸಿದಂತೆ ಸಾಮಾಜಿಕ ಕಥೆಗಳು, ಪೌರಾಣಿಕ ಕಥೆಗಳು, ಐತಿಹಾಸಿಕ ಕಥೆಗಳು, ದೃಷ್ಟಾಂತ ಕಥೆಗಳಂತೆ ಲಘು ಕಥೆಗಳು ಸಹ ಒಂದು ಬಗೆಯ ಕಥಾ ಪರಂಪರೆಯಾಗಿದ್ದು, ವಾಸ್ತವಿಕ ನೆಲೆಯ ಜೀವನಾನುಭವದ ರಸಗಟ್ಟಿತನವನ್ನೇ ನಿರ್ಮಿಸಿ ಸಂಕ್ಷಿಪ್ತತೆಯಿಂದ ಕೂಡಿ ವಿಶಾಲ ನೆಲೆಯ ಅರ್ಥವನ್ನು ಕೆಲವೇ ಪದಗಳಲ್ಲಿ ಕಟ್ಟಿಕೊಡುವ ಒಂದು ಕಥಾಶೈಲಿಯಾಗಿದೆ ಎಂದರು.

ಹಿಂದಿಯಲ್ಲಿರುವ ಲಘು ಕಥಾ ಪ್ರಕಾರ ಕನ್ನಡದಲ್ಲಿ ತರುವ ಪ್ರಯತ್ನ ಮಾಡಿದ್ದೇನೆ ಎಂದೂ ಅವರು ಈ ಸಂದರ್ಭದಲ್ಲಿ ಹೇಳಿದರು.

ನಗರದ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಸಿದ್ದು ಯರನಾಳ ಅವರು, ಡಾ. ಎಸ್.ಟಿ. ಮೇರವಾಡೆ ಅವರ ನೂರೊಂದು ಲಘು ಕಥೆಗಳು ಪುಸ್ತಕವನ್ನು ಪರಿಚಯಿಸುತ್ತ ಪ್ರತಿಯೊಂದು ಕಥೆಯು ಆಧುನಿಕ ಜೀವನದ ಚಟುವಟಿಕೆಯೊಂದಿಗೆ ನಮ್ಮ ಸಂಸ್ಕೃತಿ, ಸಂಪ್ರದಾಯ, ಇತಿಹಾಸ ಮತ್ತು ಜೀವನ ಮೌಲ್ಯಗಳನ್ನು ಹೊಂದಿವೆ. ಸಾಮಾನ್ಯವಾಗಿ ಸಣ್ಣ ಕಥೆಗಳು ಕೆಲವೇ ಘಟನೆಗಳನ್ನು ಒಳಗೊಂಡಿರುತ್ತವೆ. ಇತ್ತೀಚಿನ ಆಧುನಿಕ ದಿನಮಾನದಲ್ಲಿ, ಸಣ್ಣ ಕಥೆಗಳ ಜನಪ್ರಿಯತೆಯಿಂದ ಉತ್ತೇಜಿಸಲ್ಪಟ್ಟಿದ್ದು, ಹೆಚ್ಚು ಜನರು ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಿಗೆ ಪ್ರವೇಶವನ್ನು ಪಡೆದ ನಂತರ ಸಣ್ಣ ಕಥೆಗಳಿಗೆ ಉತ್ತೇಜನ ಬಂದಿರುವುದು ಕಾಣುತ್ತೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಚಾವಡಿ ಬಳಗದ ಗೌರವ ಅಧ್ಯಕ್ಷ ಬಿ.ಆರ್. ಬನಸೋಡೆ ಮಾತನಾಡಿ, ಇಂದು ಇಂಟರ್ನೆಟ್ ನಮ್ಮ ಬೆರಳ ತುದಿಯಲ್ಲಿದ್ದು ಎಲ್ಲಾ ರೀತಿಯ ಮನರಂಜನೆಯನ್ನು ಒದಗಿಸಿದೆ. ಈ ಸಮಯದಲ್ಲಿ, ಆಧುನಿಕ ಓದುಗರು ಸಣ್ಣ ಕಥೆಗಳಲ್ಲಿ ತಮ್ಮ ಆಸಕ್ತಿಯನ್ನು ಪುನರುಜ್ಜೀವನಗೊಳಿಸ ುತ್ತಿರುವುದುನ್ನು ಕಾಣುತ್ತೇವೆ. ಉತ್ತಮ ಸಣ್ಣ ಕಥೆಗಳನ್ನು ಮರುಶೋಧಿಸುತ್ತಿರುವುದು ಸಂತಸದ ಸಂಗತಿ ಎಂದರು.

ಇದೇ ಸಂದರ್ಭದಲ್ಲಿ ಹಂಪಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿ ಪಡೆದ ಬಳಗದ ಸದಸ್ಯ ಸುಭಾಷಚಂದ್ರ ಕನ್ನೂರ ಅವರನ್ನು ಮತ್ತು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ದಾಕ್ಷಾಯಿಣಿ ಬಿರಾದಾರ ಅವರನ್ನು ಸನ್ಮಾನಿಸಲಾಯಿತು,

ಕಾರ್ಯಕ್ರಮದಲ್ಲಿ ಬಳಗದ ಸದಸ್ಯರಾದ ಡಾ. ರಾಜಕುಮಾರ ಜೊಳ್ಳಿ, ಬಸವರಾಜ ಕುಂಬಾರ, ಮೋಹನ ಕಟ್ಟಿಮನಿ, ಡಾ. ಎಂ.ಎಸ್. ಮಾಗಣಗೇರಿ, ಶರಣಗೌಡ ಪಾಟೀಲ, ಯು.ಎನ್. ಕುಂಟೋಜಿ, ಮುಸ್ತಾಕ್ ಮಲಘಾಣ, ಪ್ರೊ. ಶಶಿಧರ ಶಿರಹಟ್ಟಿ, ಮಂಜುನಾಥ ಜನಗೊಂಡ, ಪ್ರೊ. ರಾಮಣ್ಣ ಹಾಗೂ ಕಾಲೋನಿಯ ಮಹಿಳೆಯರು ಮತ್ತು ಹಿರಿಯರು ಉಪಸ್ಥಿತರಿದ್ದರು.




**ರಬಕವಿ-ಬನಹಟ್ಟಿ :** ರಾಜ್ಯಮಟ್ಟದ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ರಬಕವಿಯ ಎಂ. ವಿ. ಪಟ್ಟಣ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಲಕ್ಷ್ಮಿ ಲೋಕಾಪುರ ಪ್ರಥಮ ಸ್ಥಾನಗಳಿಸಿ ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ. ಸಾಧಕ ವಿದ್ಯಾರ್ಥಿನಿಯನ್ನು ಹಾಗೂ ತರಬೇತುದಾರ ಮಹಾಂತೇಶ ಮುರಗೋಡರನ್ನು ಚೇರಮನ್ ಬಸವರಾಜ ಮಹಾದೇವಪ್ಪ ಯಂಡಿಗೇರಿ, ನಿರ್ದೇಶಕ ಮಂಡಳಿ, ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗ ಹರ್ಷ ವ್ಯಕ್ತಪಡಿಸಿದ್ದಾರೆ.

## ದೇಶಕ್ಕೆ ಪ್ರಥಮ ಸ್ಥಾನ: ಬಿಸನಾಳ ಹಾಲು ಉತ್ಪಾದಕರ ಸಂಘಕ್ಕೆ ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿ

# ಕೇಂದ್ರ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ 2024ನೇ ಸಾಲಿನ ಪ್ರಶಸ್ತಿ

* ಚಂದ್ರಶೇಖರ ಮೋರೆ.

**ಮಹಾಲಿಂಗಪುರ :** ಸಮೀಪದ ಬಿಸನಾಳ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘವು 2024ನೇ ಸಾಲಿನ ಕೇಂದ್ರ ಸರ್ಕಾರದ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯಿಂದ ನೀಡುವ ಅತ್ಯುತ್ತಮ ಹಾಲು ಉತ್ಪಾದಕ ಸಹಕಾರ ಸಂಘ-ಡೈರಿ ಭಾಗದಲ್ಲಿ ಪ್ರತಿಷ್ಠಿತ ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದೆ. ಬಿಸನಾಳ ಸಂಘವು ದೇಶಕ್ಕೆ ಪ್ರಥಮ ಸ್ಥಾನ ಪಡೆದುಕೊಂಡು ಕರ್ನಾಟಕ ರಾಜ್ಯ ಹಾಗೂ ಬಾಗಲಕೋಟೆ ಜಿಲ್ಲೆಯ ಕೀರ್ತಿ ಹೆಚ್ಚಿಸಿದೆ.

ಇದೇ ನ.26ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಹಾಲು ದಿನಾಚರಣೆಯಲ್ಲಿ ಕೇಂದ್ರ ಸಚಿವ ರಾಜೀವ ರಂಜನ್ ಸಿಂಘ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಆರಂಭದಲ್ಲಿ 50 ಸದಸ್ಯರಿಂದ ಪ್ರತಿನಿತ್ಯ 10 ಲೀ.ಹಾಲು ಸಂಗ್ರಹವಿತ್ತು. ಸದ್ಯ 250 ಸದಸ್ಯರಿಂದ ನಿತ್ಯ 2300 ಲೀಟರ್ ಹಾಲು ಸಂಗ್ರಹಿಸುತ್ತಿದೆ. ಸಮೂಹ ಸಂಘದಿಂದ 2400 ಸೇರಿ ನಿತ್ಯ 4700 ಲೀಟರ್ ಹಾಲಿನ ಸಂಗ್ರಹವಿದೆ. 2023-24ನೇ ಸಾಲಿನಲ್ಲಿ ಸಂಘವು 9.56 ಲಕ್ಷ ನಿವ್ವಳ ಲಾಭ ಗಳಿಸಿದೆ. ಸಂಘದ ನಿರ್ದೇಶಕ ಮಹಾದೇವ ಚಿನಗುಂಡಿ ಅವರ ತಂದೆ ಕಲ್ಲಪ್ಪ ಅವರ ಸ್ಮರಣಾರ್ಥ ದೇಣಿಗೆ ನೀಡಿದ ಜಾಗದಲ್ಲಿ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ಪ್ರತಿ ವಾರ ಹಾಲಿನ ಬಿಲ್ ಆನ್ಲೈನ್ ಮೂಲಕ ನೇರವಾಗಿ ಹಾಲು ಉತ್ಪಾದಕರ ಖಾತೆಗೆ ಜಮಾ






ಮಾಡಲಾಗುತ್ತಿದೆ.

ಸಂಘದ ಮಾದರಿ ಚಟುವಟಿಕೆಗಳು:

ಕೆಸರಗೊಪ್ಪ ಗ್ರಾಪಂ ವ್ಯಾಪ್ತಿಯ ಬಿಸನಾಳ ಗ್ರಾಮದಿಂದ ಬಿಸನಾಳ ಗ್ರಾಮದಿಂದ 2.5 ಕಿ.ಮೀ ದೂರದ ತೋಟದ ವಸತಿಯಲ್ಲಿ 1993ರಲ್ಲಿ ಡೇರಿ ಸ್ಥಾಪನೆ. 2010 ರಲ್ಲಿ ಬೃಹತ್ ಪ್ರಮಾಣದ ಮಿಶ್ರತಳಿ ಆಕಳು ಮತ್ತು ಕರುಗಳ ಪ್ರದರ್ಶನ ಏರ್ಪಡಿಸಿ ಬಹುಮಾನ ನೀಡಿ ಉತ್ತೇಜಿಸಿದೆ. 2016ರಲ್ಲಿ ಅವಳಿ ಜಿಲ್ಲೆ ಹಾಲು ಒಕ್ಕೂಟದಿಂದ 5 ಸಾವಿರ ಲೀ. ಸಾಮರ್ಥ್ಯದ ಹಾಲು ಶೀತಲೀಕರಣ ಘಟಕ ಸ್ಥಾಪಿಸಿದೆ. 2018-19ನೇ ಸಾಲಿನಲ್ಲಿ ಹಾಲಿನ ಶುದ್ಧತೆಗೆ ಎಲ್ಲ ಹಾಲುತ್ಪಾದಕರಿಗೆ ರೂ. 1.29 ಲಕ್ಷ ವೆಚ್ಚದಲ್ಲಿ ಉಚಿತ ಸ್ಟೀಲ್ ಕ್ಯಾನ್ ವಿತರಿಸಿದೆ. 2019-20ನೇ ಸಾಲಿನಲ್ಲಿ ನೆರೆ ಹಾವಳಿಯಿಂದ ಸಂಕಷ್ಟದಲ್ಲಿದ್ದ ಹಾಲು ಉತ್ಪಾದಕರ ಜಾನುವಾರುಗಳಿಗೆ ರೂ. 50 ಸಾವಿರ ವೆಚ್ಚದಲ್ಲಿ ಉಚಿತ ಪಶು ಆಹಾರ ವಿತರಿಸಿದೆ. ಪ್ರತಿ ವರ್ಷ ಹಾಲು ಉತ್ಪಾದಕರ ಪ್ರತಿಭಾವಂತ ಮಕ್ಕಳಿಗೆ 5 ಸಾವಿರ ಪ್ರೋತ್ಸಾಹಧನ ವಿತರಿಸುತ್ತಿದೆ. ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಸೌಲಭ್ಯವಿದೆ. 2020-21ನೇ ಸಾಲಿನ ಕೊರೊನಾ ವಾರಿಸ್ ಆಶಾ ಕಾರ್ಯಕರ್ತೆಯರಿಗೆ ಗೌರವಧನ ನೀಡಿ ಸನ್ಮಾನಿಸಿದೆ. ಲಾಕೌಡೌನ್ ಸಂಕಷ್ಟದಲ್ಲಿದ್ದ ರೈತರಿಗೆ (ಅವಳಿ ಜಿಲ್ಲೆಯಲ್ಲೇ ಮೊದಲು) ರೂ.1.51 ಲಕ್ಷ ಲಾಭಾಂಶ ವಿತರಿಸಿದೆ. ಸದಸ್ಯರಿಗೆ ನಿಯಮಿತವಾಗಿ ಡಿವಿಡಂಡ್ ಮತ್ತು ಬೋನಸ್ ವಿತರಿಸಲಾಗುತ್ತಿದೆ.

ಸಂಘದ ಯಶಸ್ವಿನ ರೂವಾರಿಗಳು:

ಸಂಘದ ಅಧ್ಯಕ್ಷನ್ನಿವಲಿಂಗಪ್ಪ ವಾಲಿ, ಉಪಾಧ್ಯಕ್ಷೆ ಯಲ್ಲವ್ವ ಮ.ಚಿನಗುಂಡಿ, ನಿರ್ದೇಶಕರಾದ ಗಿರಿಮಲ್ಲಪ್ಪ ಚಿಂಚಲಿ, ಮುರಿಗೆಪ್ಪ ಶಿರೋಳ, ಶ್ರೀಶೈಲ ಮಹಾದೇವ ಅಂದಾನಿ, ಸುರೇಶ ನಿಂಗಪ್ಪ ಉಳ್ಳಾಗಡ್ಡಿ, ಬಾಳಪ್ಪ ಹುಕ್ಕೇರಿ, ಮಹಾದೇವ ಉಳ್ಳಾಗಡ್ಡಿ, ಶಿವಲಿಂಗಪ್ಪ ನಿಪನ್ಯಾಳ, ಮಲ್ಲಪ್ಪ ಗುರಾಣಿ, ವಿಠ್ಠಲ ತಳವಾರ, ಕಲ್ಲೋಳೆಪ್ಪ ವಡ್ಡರ, ಶ್ರೀಮತಿ ಕಾಶವ್ವ ಹೊಸೂರ ಅವರು ಸಂಘದ ಯಶಸ್ವಿಗೆ ಶ್ರಮಿಸುತ್ತಿದ್ದಾರೆ.

**ವಿಜಯಪುರ-ಬಾಗಲಕೋಟೆ ಹಾಲು ಒಕ್ಕೂಟದ ಅಧ್ಯಕ್ಷ ಈರಣ್ಣ ಕರಿಗೌಡರ, ವ್ಯವಸ್ಥಾಪಕ ನಿರ್ದೇಶಕ ಡಿ.ಟಿ.ಶಿವಶಂಕರ, ವ್ಯವಸ್ಥಾಪಕ ಡಾ.ಗಜರಾಜ ರನತೂರ, ಜಮಖಂಡಿ ಉಪವಿಭಾಗದ ಸಹಾಯಕ ವ್ಯವಸ್ಥಾಪಕರಾದ ಆರ್.ಎಸ್.ಚವ್ಹಾಣ, ವಿಸ್ತರಣಾಧಿಕಾರಿ ಎಸ್.ಎಸ್.ಶೆಟ್ಟೆನ್ನವರ ಅವರ ಸಹಕಾರ, ಮಾರ್ಗದರ್ಶನದಲ್ಲಿ ನಮ್ಮ ಸಂಘದ ನಿರ್ದೇಶಕರು ಹಾಗೂ ಸಿಬ್ಬಂದಿಯ ದಕ್ಷ ಕಾರ್ಯಕ್ಕೆ ಪ್ರತಿಫಲವಾಗಿ ನಮ್ಮ ಸಂಘಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿದ್ದು ಖುಷಿ ತಂದಿದೆ.**

**। ಗಿರಿಮಲ್ಲಪ್ಪ ಸುಳ್ಳನವರ**
**ಮುಖ್ಯ ಕಾರ್ಯನಿರ್ವಾಹಕರು.**
**ಬಿಸನಾಳ ಡೇರಿ.**

---

**ಬಿಸನಾಳ ಡೇರಿಯ ಎಲ್ಲ ಪದಾಧಿಕಾರಿಗಳು ಮತ್ತು ಸಿಬ್ಬಂದಿಯ ಪ್ರಾಮಾಣಿಕ ಪ್ರಯತ್ನ, ಸೇವಾ ಸಮರ್ಪಣಾ ಮನೋಭಾವದ ದುಡಿಮೆಯಿಂದ ಡೇರಿಗೆ ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿ ಲಭಿಸಿದೆ. ಎಲ್ಲ ಹಾಲು ಉತ್ಪಾದಕರಿಗೂ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಿಬ್ಬಂದಿಗೂ ಅಭಿನಂದನೆಗಳು. ಇದು ಇತರ ಸಂಘಗಳಿಗೆ ಮಾದರಿಯಾಗಲಿ.**

**। ಡಿ.ಟಿ.ಶಿವಶಂಕರ,**
**ವ್ಯವಸ್ಥಾಪಕ ನಿರ್ದೇಶಕರು. ವಿಜಯಪುರ-ಬಾಗಲಕೋಟೆ ಹಾಲು ಒಕ್ಕೂಟ.**

ಅವಳಿ ಜಿಲ್ಲೆಯ ಅತ್ಯುತ್ತಮ ಸಂಘ :

ವಿಜಯಪುರ-ಬಾಗಲಕೋಟೆ ಜಿಲ್ಲಾ ಹಾಲು ಒಕ್ಕೂಟದ ಅವಳಿ ಜಿಲ್ಲೆಯ ಹಾಲು ಉತ್ಪಾದರಕ ಸಹಕಾರಿ ಸಂಘಗಳಲ್ಲಿಯೇ ಬಿಸನಾಳದ ಸಂಘವು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಸಂಘದ ಆಡಳಿತ ಮಂಡಳಿ, ಹಾಲು ಉತ್ಪಾದಕ ಸದಸ್ಯರು ಮತ್ತು ಸಿಬ್ಬಂದಿ ವರ್ಗ ಹಾಗೂ ವಿಜಯಪುರ-ಬಾಗಲಕೋಟ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಎಲ್ಲ ಅಧಿಕಾರಿಗಳು ತುಂಬಾ ಶ್ರಮವಹಿಸಿ ಕೆಲಸ ನಿರ್ವಹಿಸಿದ್ದರಿಂದಲೇ ಪ್ರತಿಷ್ಠಿತ ರಾಷ್ಟ್ರೀಯ ಗೋಪಾಲ ರತ್ನ ಪ್ರಶಸ್ತಿಗೆ ಬಿಸನಾಳ ಡೈರಿ ಆಯ್ಕೆಯಾಗಿದೆ ಎಂದರೆ ತಪ್ಪಾಗಲಾರದು.

ನಿತ್ಯ 50 ಯೂನಿಟ್ ವಿದ್ಯುತ್ ಉತ್ಪಾದನೆ :

ಬಿಸನಾಳ ಡೈರಿಯ ಕಟ್ಟಡದ ಮೇಲೆ 12.05 ಕೀ.ಲೋ ವ್ಯಾಟ್‌ನ ಸೋಲಾರ್ ಘಟಕವನ್ನು ಅಳವಡಿಸಿದೆ. ನಿತ್ಯ ಸಂಘದ ಕಚೇರಿ ಮತ್ತು ಶೀತಲೀಕರಣ ಘಟಕ್ಕೆ ಸುಮಾರು 70 ಯೂನಿಟ್‌ವರೆಗೆ ವಿದ್ಯುತ್ ಬೇಕಾಗುತ್ತದೆ. ಅದರಲ್ಲಿ 50 ಯೂನಿಟ್ ಸ್ವಂತ ಉತ್ಪಾದಿಸಿದರೆ, 20 ಯೂನಿಟ್ ಕೆಇಬಿಯಿಂದ ಬಳಸಿಕೊಳ್ಳಲಾಗುತ್ತಿದೆ. ನಿತ್ಯ 50 ವಿದ್ಯುತ್ ಬಳಕೆಯ ಉಳಿತಾಯದೊಂದಿಗೆ ಸ್ವಾವಲಂಬನೆಯೊಂದಿಗೆ ದಕ್ಷವಾಗಿ ಕಾರ್ಯನಿರ್ವಹಿಸುತ್ತಿದೆ. 2021ರಲ್ಲಿಯೂ ಬಿಸನಾಳ ಸಹಕಾರಿ ಸಂಘಕ್ಕೆ ಅತ್ಯುತ್ತಮ ಸಹಕಾರಿ ಸಂಘ ರಾಷ್ಟ್ರೀಯ ಪ್ರಶಸ್ತಿ ಬಂದಿತ್ತು.

## ರನ್ನಬೆಳಗಲಿ ಪಟ್ಟಣ ಪಂಚಾಯತ ಸಾಮಾನ್ಯಸಭೆ

# ಕಾಮಗಾರಿ ಬದಲಾವಣೆಗಾಗಿ ತಾರಕ್ಕೇರಿದ ಸಭೆ: ಸದಸ್ಯರ ಮಧ್ಯೆ ಮಾತಿನ ಜಟಾಪಟಿ

**ಮಹಾಲಿಂಗಪುರ :** ರಾಜ್ಯದಲ್ಲಿ ಸರ್ಕಾರ ಬೇರೆ, ಸ್ಥಳಿಯ ಆಡಳಿತ ಅಧಿಕಾರ ಬೇರೆ ಬೇರೆಯಾಗಿದ್ದರೆ ಅಲ್ಲಿ ನಡೆಯುವ ರಾಜಕೀಯ ಮೇಲಾಟ, ಆರೋಪ–ಪ್ರತ್ಯಾರೋಪಗಳು ಹೇಗಿರುತ್ತವೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಿತ್ತು ಸಮೀಪದ ರನ್ನಬೆಳಗಲಿ ಪಪಂನ ಆಡಳಿತ ಮಂಡಳಿಯ 3ನೇ ಸಾಮಾನ್ಯ ಸಭೆ.

ರನ್ನಬೆಳಗಲಿಯ ಪಪಂ ಅಧ್ಯಕ್ಷೆ ರೂಪಾ ಸದಾಶಿವ ಹೊಸಟ್ಟಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯಸಭೆಯಲ್ಲಿ ಸನ್ 2024–25ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿನ 15 ಕಾಮಗಾರಿ ಹಾಗೂ 15ನೇ ಹಣಕಾಸು ಕಾಮಗಾರಿಗಳಲ್ಲಿನ 5 ಕಾಮಗಾರಿಗಳ ಬದಲಾವಣೆಯ ಕುರಿತು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ಗಂಟೆಗಳ ಕಾಲ ನಡೆದ ಮಾತಿನ ಜಟಾಪಟಿಯು ಸಭೆಯ ಹೈಲೈಟ್ ಆಗಿತ್ತು.

**ಕಾಮಗಾರಿ ಬದಲಾವಣೆಗೆ ತೀವ್ರ ವಿರೋಧ :**
ವಿಪಕ್ಷದ ಸದಸ್ಯ ಪ್ರವೀಣ ಪಾಟೀಲ ಕಾಮಗಾರಿಗಳ ಬದಲಾವಣೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಆಡಳಿತಾಧಿಕಾರಿಗಳ ಅವಧಿಯಲ್ಲಿ ಕಾಮಗಾರಿಗಳುಮಂಜೂರಿಯಾಗಿ,ಕಾಮಗಾರಿ ಆದೇಶ ಪತ್ರಗಳನ್ನು ವಿತರಿಸಲಾಗಿದೆ. ಇದರಲ್ಲಿ ಕೆಲವು ಕಾಮಗಾರಿಗಳು ಪೂರ್ಣಗೊಂಡು ಬಿಲ್ ಹಂತಕ್ಕೆ ಬಂದಿವೆ. ಹಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಹೀಗಿರುವಾಗ ಕಾಮಗಾರಿಗಳನ್ನು ಬದಲಾವಣೆ ಹೇಗೆ ಮಾಡುತ್ತಿರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿ, ಕಾಮಗಾರಿ ಮುಗಿರುವ ಮತ್ತು ಪ್ರಗತಿಯಲ್ಲಿ ಕಾಮಗಾರಿಗಳ ಭಾವಚಿತ್ರಗಳನ್ನು ಸಭೆಯಲ್ಲಿ ಪ್ರದರ್ಶಿಸಿ, ಕಾಮಗಾರಿ ಬದಲಾವಣೆಯ ಪಟ್ಟಿಯನ್ನು ಜಿಲ್ಲಾಧಿಕಾರಿಗಳು ತಿರಸ್ಕರಿಸಿದ ನಂತರವು ಕೇವಲ ಆಡಳಿತ ಮಂಡಳಿ ಇದೆ ಎಂಬ ಕಾರಣಕ್ಕೆ ಆಗಿರುವ ಕಾಮಗಾರಿಗಳನ್ನು ಬದಲಾವಣೆಯ ಪಟ್ಟಿ ಸೇರಿಸಿದರೆ, ಕೆಲಸ ಮಾಡಿರುವ ಗುತ್ತಿಗೆದಾರರ ಪರಿಸ್ಥಿತಿ ಏನಾಗಬೇಕು. ಪಟ್ಟಣದ ಅಭಿವೃದ್ಧಿ ಕೆಲಸಗಳಿಗೆ ಆಡಳಿತ ಮಂಡಳಿಯವರು ವಿರೋಧಿಸುತ್ತಿರುವದನ್ನು ಖಂಡಿಸುತ್ತೇನೆ ಎಂದರು.

**ಬಹುಮತ ನಮ್ಮದು ಠರಾವು ಪಾಸ್ ಮಾಡಿ :**
ಆಡಳಿತ ಪಕ್ಷದ ಸ್ಥಾಯಿ ಸಮಿತಿ ಚೇರಮನ್ ಪ್ರವೀಣ ಭರಮನಿ ಮಾತನಾಡಿ ನಮ್ಮ ಯಾವ ಸದಸ್ಯರ ಗಮನಕ್ಕೆ ಬಾರದೇ ಕಾಮಗಾರಿಗಳನ್ನು ಮಂಜೂರಿ ಮಾಡಲಾಗಿದೆ. ಸದ್ಯ ಪಪಂನಲ್ಲಿ ನಮ್ಮ ಅಧಿಕಾರ ಇರುವದರಿಂದ ನಾವು ಕಾಮಗಾರಿಗಳ ಬದಲಾವಣೆಯ ಪಟ್ಟಿ ನೀಡಿದ್ದೇವೆ. ನಮ್ಮದು ಬಹುಮತ ಇರುವ ಕಾರಣ ನಮ್ಮ ಅಧ್ಯಕ್ಷ–ಉಪಾಧ್ಯಕ್ಷರು ಮತ್ತು ಸದಸ್ಯರ ಒಪ್ಪಿಗೆಯಂತೆ ಕಾಮಗಾರಿಗಳ ಬದಲಾವಣೆಯ ಠರಾವು ಪಾಸ್ ಮಾಡಬೇಕು. ಅದಕ್ಕೆ ವಿರೋಧ ವ್ಯಕ್ತಪಡಿಸಿದನ್ನು ಠರಾವಿನಲ್ಲಿ ನಮೂದಿಸಿ. ಮುಖ್ಯವಾಗಿ ಡಿಸಿಯವರಿಂದ ಬದಲಾವಣೆ ಕಾಮಗಾರಿಗಳ ಪಟ್ಟಿ ತೀರಸ್ಕೃತವಾಗಿ ಬಂದಿರುವ ವಿಷಯ ನಮ್ಮ ಸದಸ್ಯರ ಗಮನಕ್ಕೆ ತಂದಿಲ್ಲ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



**ಮೂರನೇ ಸಭೆಯಲ್ಲಿಯೂ ಬಿಲ್‌ಗೆ ಅನುಮತಿ ಇಲ್ಲ :**
ಪಪಂ ಆಡಳಿತಧಿಕಾರಿಗಳ ಅವಧಿಯಲ್ಲಿ ಮಾಡಿರುವ 4 ಕಾಮಗಾರಿಗಳ ಒಟ್ಟು 6 ಲಕ್ಷ ಬಿಲ್ ಪಾವತಿಗೆ ಆಡಳಿತ ಮಂಡಳಿಯ ಸದಸ್ಯರು ಮೂರನೇ ಸಭೆಯಲ್ಲಿಯೂ ವಿರೋಧ ವ್ಯಕ್ತಪಡಿಸಿದರು.ಇತ್ತ ವಿಪಕ್ಷದ ಸದಸ್ಯರು ಆಡಳಿತಾಧಿಕಾರಿಗಳಿಗೆ ಬೆಲೆ ಇಲ್ಲವೇ, ಅವರ ಅವಧಿಯಲ್ಲಿ ಪಟ್ಟಣದ ಅಭಿವೃದ್ಧಿಗಾಗಿಯೇ ನಡೆದ ಕಾಮಗಾರಿಗಳ ಬಿಲ್‌ಗೆ ತಡೆ ನೀಡುವದು ಯಾವ ನ್ಯಾಯ? ಕೆಲಸ ಮಾಡಿದ ಗುತ್ತಿಗೆದಾರರ ಗತಿ ಏನು?, ಇದು ಅಭಿವೃದ್ದಿಗೆ ಆಡಳಿತ ಪಕ್ಷದಿಂದ ಆಗುವ ಅಡ್ಡಿಯಲ್ಲವೇ? ಎಂದು ಪ್ರಶ್ನಿಸಿದರು.

**ಗಂಭೀರತೆ ಕಳೆದುಕೊಂಡ ಸಭೆ :**
ನಿಮ್ಮ ಸರ್ಕಾರ ಇದ್ದಾಗ 20 ವರ್ಷ ಬೇಕಾದ ಮಾಡಿರಿ? ಈಗ ನಮ್ಮ ಸರ್ಕಾರ ಬಂದು ಒಂದುವರೆವರ್ಷವಾಗಿದೆ.ಆಡಳಿತಾಧಿಕಾರಿಗಳ ಅವಧಿಯಲ್ಲಿ ಆದ ಕೆಲಸಗಳಿಗೆ ವಿರೋಧ ಮಾಡುತ್ತಿರಿ ಎಂದು ವಿಪಕ್ಷ ಸದಸ್ಯರು ವಾದಿಸಿದರೇ, ಇತ್ತ ಆಡಳಿತ ಮಂಡಳಿ ಸದಸ್ಯರು ಶಾಸಕರು, ಸಚಿವರು, ಸರ್ಕಾರ ನಿಮ್ಮದೇ ಇದೆ ಎಂದು ನೀವು ನಮ್ಮ ವಾರ್ಡಗಳಿಗೆ ಕೆಲಸ ನೀಡದೇ ನಿಮ್ಮ ವಾರ್ಡಿಗೆ ಹಾಕಿಕೊಂಡಿದ್ದಿರಿ.

> **ಸಮಾನ ಆದ್ಯತೆ ನೀಡಿ**
> ಸದಸ್ಯರು ಪರವಿರೋಧ ಮಾಡಿದರು ಸಹ, ಅಧಿಕಾರಿಗಳು ಕಾನೂನು ಪ್ರಕಾರ ಏನು ಮಾಡಲು ಸಾಧ್ಯ ಅದನ್ನು ಠರಾವಿನಲ್ಲಿ ಬರೆದು, ನಿಗದಿತ ವೇಳೆಗೆ ಸಭೆ ಮುಗಿಸಬೇಕು. ಸರ್ಕಾರ ಇರುವ ವಿಪಕ್ಷ ಸದಸ್ಯರು ತಮ್ಮ ವಾರ್ಡಿನಲ್ಲಿ ಹೆಚ್ಚು ಕೆಲಸಗಳನ್ನು ಹಾಕಿಕೊಂಡ ಕಾರಣ, ನಮ್ಮ ಆಡಳಿತ ಮಂಡಳಿ ಸದಸ್ಯರು ಕಾಮಗಾರಿ ಬದಲಾವಣೆಗೆ ಒತ್ತಾಯಿಸುತ್ತಿದ್ದೇವೆ. ಅಧಿಕಾರಿಗಳು ಈ ರೀತಿ ಚರ್ಚೆಗೆ ಅವಕಾಶ ನೀಡಿದರೆ ರಾತ್ರಿಹಗಲು ಆದರೂ ಸಭೆ ಮುಗಿಯಲ್ಲ. ಅಧಿಕಾರಿಗಳು ಆಡಳಿತ ಮಂಡಳಿ ಮತ್ತು ವಿಪಕ್ಷ ಸದಸ್ಯರಿಗೆ ಸಮಾನ ಆದ್ಯತೆ ನೀಡಿ ಕಾನೂನು ಅಡಿಯಲ್ಲಿ ಪಟ್ಟಣದ ಅಭಿವೃದ್ಧಿ ಕೆಲಸಗಳಿಗೆ ಶ್ರಮಿಸಿರಿ.
>
> । ಸಿದ್ದುಗೌಡ ಪಾಟೀಲ.
> **ಮಾಜಿ ಅಧ್ಯಕ್ಷರು–ಹಾಲಿ ಸದಸ್ಯರು.**

ಮೇಲೆ ನಿಮ್ಮ ಸರ್ಕಾರ ಇದ್ದರೆ, ಪಪಂನಲ್ಲಿ ನಮ್ಮ ಅಧಿಕಾರ ಮತ್ತು ಬಹುಮತವಿದೆ. ನಾವು ಕಾಮಗಾರಿ ಬದಲಾವಣೆ ಮಾಡಿಯೇ ಸಿದ್ದ ಎಂಬ ಪರಸ್ಪರ ಮಾತಿನ ಚಕಮಕಿ, ಆರೋಪ–ಪ್ರತ್ಯಾರೋಪಗಳಲ್ಲಿಯೇ ಸಾಮಾನ್ಯ ಸಭೆಯು ಗಂಭೀರತೆ ಕಳೆದುಕೊಂಡಿತ್ತು. ಅಂತಿಮವಾಗಿ ಉಭಯ ಪಕ್ಷಗಳ ಪ್ರಮುಖರ ಸಂಧಾನಸಭೆ ಕರೆದು, ಬಾಕಿ ಬಿಲ್‌ಪಾವತಿಸುವದಾಗಿ ಅಧಿಕಾರಿಗಳು ತಿಳಿಸಿದರು.

**ಸದಸ್ಯರ ಪಟ್ಟು ಅಧಿಕಾರಿಗಳು ಹೈರಾಣ :**
ಸರ್ಕಾರ ಇರುವ ಕಾರಣ ವಿಪಕ್ಷ ಸದಸ್ಯರು, ಸ್ಥಳಿಯ ಅಧಿಕಾರ ಹೊಂದಿದ ಆಡಳಿತ ಪಕ್ಷದ ಸದಸ್ಯರು ತಮ್ಮ ತಮ್ಮ ನಿಲುವುಗಳನ್ನು ಪ್ರದರ್ಶಿಸಿ,
ಇದು ಠರಾವು ಆಗಬೇಕು, ಇದಕ್ಕೆ ನಮ್ಮ ವಿರೋಧವಿದೆ ಹೇಳಿಕೆಗಳಿಗೆ ತಬ್ಬಿಬ್ಬಾದ ಅಧಿಕಾರಿಗಳು ಯಾವ ವಿಷಯಕ್ಕೆ ಠರಾವು ಪಾಸ್, ಯಾವುದಕ್ಕೆ ತಡೆ ಎಂಬ ಗೊಂದಲದಲ್ಲಿ ಅಸಹಾಯಕರಾಗಿ ಎರಡು ಪಕ್ಷಗಳ ಸದಸ್ಯರಿಗೆ ಕಾಮಗಾರಿಗಳ ಸಮಗ್ರ ಮಾಹಿತಿ ನೀಡುವದರಲ್ಲಿಯೇ ಹೈರಾಣಾದರು.

**ಎರಡುವರೆ ಗಂಟೆ ನಡೆದ ಸಭೆ :**
ಕೇವಲ ಪ್ರಮುಖ 4 ವಿಷಯಗಳನ್ನು ಹೊಂದಿದ್ದ ಸಾಮಾನ್ಯ ಸಭೆಯು ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಿ ಸಂಜೆ 5–30ರವರೆಗೂ ಮುಂದುವರೆದಿತ್ತು. ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮಾತ್ರ ಸಭೆಯಲ್ಲಿ ಯಾವುದೇ ಮಾತನಾಡದೇ, ಬಿಜೆಪಿ ಸದಸ್ಯರು ಮತ್ತು ಚೇರಮನ್‌ನರ ಮಾತಿಗೆ ಒಪ್ಪಿಗೆ ಸೂಚಿಸುತ್ತಾ ಮೌನಕ್ಕೆ ಶರಣಾಗಿದ್ದರು.

ಮುಖ್ಯಾಧಿಕಾರಿ ಎನ್.ಎ.ಲಮಾಣಿ, ಉಪಾಧ್ಯಕ್ಷೆ ಸಹನಾ ಸಾಂಗ್ಲೀಕರ ಸೇರಿದಂತೆ ಆಡಳಿತ ಮಂಡಳಿಯ ಕಾಶವ್ವ ಪುರಾಣಿಕ, ದ್ರಾಕ್ಷಾಯಿಣಿ ಮುರನಾಳ,ಸಾವಿತ್ರಿ ರಾಮದುರ್ಗ, ಸದಾಶಿವ ಸಂಕ್ರಟ್ಟಿ, ಕರೆಪ್ಪ ಕುಂಬಾಳಿ,ಭೀಮಸಿ ಹೊಸಮನಿ, ವಿಪಕ್ಷದ ನೀಲಕಂಠ ಸೈದಾಪೂರ, ಮುತ್ತು ಸಣ್ಣಟ್ಟಿ, ಮುತ್ತು ನಾಯಕ, ಮುಬಾರಕ ಅತ್ತಾರ, ಅನಿತಾ ಮಲಾವಡಿ, ಗೌರವ್ವ ಅಮಾತಿ ಸೇರಿದಂತೆ ಪಪಂ ಅಧಿಕಾರಿಗಳು ಸಿಬ್ಬಂದಿ ಇದ್ದರು.

# ವಿಜಯಪುರ: ಎಬಿವಿಪಿ ವತಿಯಿಂದ ನಶೆ ಮುಕ್ತ ಕ್ಯಾಂಪಸ್ ಅಭಿಯಾನ

**ವಿಜಯಪುರ :** ಎಬಿವಿಪಿ ವತಿಯಿಂದ ನಶೆ ಮುಕ್ತ ಕ್ಯಾಂಪಸ್ ಅಭಿಯಾನದ ಪೋಸ್ಟರ್ ಅನ್ನು ನಗರದ ಶ್ರೀ ಬಿ ಎಂ ಪಾಟೀಲ್ ಇನ್ಸಿಟ್ಯೂಟ್ ಆಫ್ ಸೈನ್ಸ್ ನರ್ಸಿಂಗ್ ಕಾಲೇಜಿನಲ್ಲಿ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಪ್ರವೀಣ ಬಿರಾದಾರ ಮಾತನಾಡಿ, ಭಾರತ ದೇಶವು ತನ್ನದೇ ಆದ ಜನತೆವೈಶಿಷ್ಟ್ಯತೆಹೊಂದಿಶತಮಾನಗಳಿಂದ ಅನೇಕ ದೇಶಗಳಿಗೆ ಮಾದರಿಯಾಗುತ್ತಾ ಬಂದಿದೆ. ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳಿಗೆ ವಿದ್ಯಾರ್ಥಿಗಳು ಅತಿ ಹೆಚ್ಚು ಬಲಿಯಾಗುತ್ತಿದ್ದಾರೆ. ಅದರಿಂದ ಎಷ್ಟೋ ಜನ ಈ ಮಾದಕ ವಸ್ತುಗಳಿಗೆ ಅಂಟಿಕೊಂಡು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ.



ಇತ್ತೀಚಿನ ಸಂಸತ್ತಿನ ಸ್ಥಾಯಿ ಸಮಿತಿ ಒಂದು ನೀಡಿದ ವರದಿ ಪ್ರಕಾರ ಮಾದಕ ವಸ್ತುಗಳ ಪೂರೈಕೆಯ ಜಾಲದ ಟಾರ್ಗೆಟ್ ಶಾಲಾ ಕಾಲೇಜು ವಿದ್ಯಾರ್ಥಿಗಳು ಆಗಿದ್ದಾರೆ.

ಆದ್ದರಿಂದ, ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸಿ ಜಾಗೃತಿ ಮೂಡಿಸಲು ಎಬಿವಿಪಿ ಈ ಒಂದು ನಶೆ ಮುಕ್ತ ಕ್ಯಾಂಪಸ್ ಎನ್ನುವ ಅಭಿಯಾನವನ್ನು ಹಮ್ಮಿಕೊಂಡಿದೆ ಎಂದು ಹೇಳಿದರು. ಇದೇ ವೇಳೆ ಜಿಲ್ಲಾ ಸಂಚಾಲಕ ಮಂಜುನಾಥ ಹಳ್ಳಿ,

ಮಾತನಾಡಿ, ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಅತಿ ಹೆಚ್ಚು ವಿದ್ಯಾರ್ಥಿಗಳು ತಂಬಾಕು, ಗುಟ್ಕಾ ಹಾಗೂ ಅನೇಕ ಇನ್ನಿತರ ಮಾದಕ ವಸ್ತುಗಳಿಗೆ ಬಲಿಯಾಗಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಈ ಒಂದು ವಿದ್ಯಾರ್ಥಿ ಜೀವನದಲ್ಲಿ ಈ ತರಹದ ಮಾದಕ ವಸ್ತುಗಳಿಗೆ ಬಲಿಯಾಗಿ ಪ್ರಾಣವನ್ನು ಕಳೆದುಕೊಳ್ಳುವುದರಿಂದ ತಮ್ಮ ಕುಟುಂಬಕ್ಕೆ ಹಾಗೂ ದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೆ ಈ ಮಾದಕ ವಸ್ತುಗಳಿಗೆ ಬಲಿಯಾಗಬಾರದು. ತಮ್ಮ ಪ್ರಾಣವನ್ನು ಕಳೆದುಕೊಳ್ಳಬಾರದು. ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಎಬಿವಿಪಿ ಈ ನಶೆ ಮುಕ್ತ ಜಾಗೃತಿ ಅಭಿಯಾನವನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಅಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಸೂತಿ ಬಾಲಕಿಯರ ಖೋಖೋ ರಾಷ್ಟ್ರಮಟ್ಟಕ್ಕೆ ಆಯ್ಕೆ

**ಕೊಲ್ಹಾರ :** ತಾಲೂಕಿನ ಮಸೂತಿ ಗ್ರಾಮದ ವೆಂಕಟೇಶ್ವರ ಗೆಳೆಯರ ಬಳಗದಿಂದ ಶ್ರೀ ಗುರು ಸಂಗನಬಸವೇಶ್ವರ ಶಾಲೆ ಆವರಣದಲ್ಲಿ ಜರುಗಿದ ಕ್ರಿಕೇಟ ಪ್ರಿಮಿಯರ್ ಲೀಗ್ ಸಮಾರೋಪ ಸಮಾರಂಭದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 17 ವಯೋಮಾನದೊಳಗಿನ ಬಾಲಕೀಯರ ರಾಷ್ಟ್ರಮಟ್ಟದ ಖೋ ಖೋ ಪಂದ್ಯಾವಳಿಗೆ ಆಯ್ಕೆಯಾದ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ಪೌಢಶಾಲೆಯ ಕುಮಾರಿ ಶ್ರಾವಣಿ ಸಾಲಹಳ್ಳಿ ಹಾಗೂ ವರ್ಷಾ ಬಂಡಿವಡ್ಡರಗೆ ರಾಜ್ಯ ಸಹಕಾರ ಮಹಾಮಂಡಳಿ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ ಹಾಗೂ ಮಸೂತಿ ವಿವಿದೊದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಕೆ ವಿ ಕುಲಕರ್ಣಿ ಗೌರವಿಸಿ ಸನ್ಮಾನಿಸಿದರು.



ಗ್ರಾಮ ಪಂಚಾಯಿತಿ ಅಧ್ಯಕ್ಷ ಮುದಕಣ್ಣ ಹರಿಜನ ಸರ್ಕಾರಿ ವಿಶೇಷ ವಕೀಲರಾದ ಎಸ್ ಎಸ್ ಗರಸಂಗಿ,ಮಾಜಿ ಗ್ರಾ.ಪಂ ಅಧ್ಯಕ್ಷ ಸಂತೋಷ ಗಣಾಚಾರಿ, ಮಕ್ಕಳ ಸಾಹಿತ್ಯ ಪರಿಷತ್ತು ಅಧ್ಯಕ್ಷ ಜಗದೀಶ ಸಾಲಳ್ಳಿ,ಯಮನೂರಿ ತಳವಾರ,ಈಶ್ವರ ಹರಿಜನ್ ಸೇರಿದಂತೆ ಹಲವಾರು ಗಣ್ಯರು ಯುವಕ ಮಿತ್ರರು ಅಭಿನಂದಿಸಿ ಸನ್ಮಾನಿಸಿದರು.

# ಬಿ.ಟಿ.ಆಕ್ಟ್ 1949 ರದ್ದುಗೊಳಿಸಿ ಬುದ್ದಗಯಾದ ಮಹಾಬೋದಿ ಮಹಾ ವಿಹಾರದ ಆಡಳಿತ ಸಂಪೂರ್ಣವಾಗಿ ಬೌದ್ಧರಿಗೆ ನೀಡಲು ಮನವಿ

**ಬಾಗಲಕೋಟ :** ಸಂವಿಧಾನ ದಿನಾಚರಣೆ ಪ್ರಯುಕ್ತ ಬೌದ್ಧರ ಧಾರ್ಮಿಕ ಹಕ್ಕಿಗಾಗಿ ಬಿ.ಟಿ ಆಕ್ಟ್ 1949 ರದ್ದುಗೊಳಿಸಿ ಬುದ್ದಗಯಾದ ಮಹಾಬೋದಿ ಮಹಾ ವಿಹಾರದ ಆಡಳಿತ ಸಂಪೂರ್ಣವಾಗಿ ಬೌದ್ಧರಿಗೆ ನೀಡಿ ಅನುಕೂಲ ಮಾಡಿಕೊಡಬೇಕೆಂದು ಇಲ್ಲಿನ ಬೌದ್ಧ ವಿಹಾರ ನಿರ್ಮಾಣ ಸಂಸ್ಥೆ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿ ನವದೆಹಲಿಯವರಿಗೆ ಮನವಿ ಸಲ್ಲಿಸಿದೆ.



ಬುದ್ಧ ಗಯಾ ಜಗತ್ತಿನ ಬೌದ್ಧರಿಗೆಲ್ಲ ಪರಮ ಪವಿತ್ರವಾದ ಸ್ಥಳ ರಾಜಕುಮಾರ ಸಿದ್ದಾರ್ಥ ಬೋಧಿ ಜ್ಞಾನ ಪಡೆದ ಭಗವಾನ್ ಬುದ್ಧನಾದ ಪಾವನ ಸ್ಥಳ ಈ ಕ್ಷೇತ್ರ ಬುದ್ಧನ ಕಾಲದಿಂದಲೂ ಪೂಜ್ಯನೀಯವಾಗಿದೆ ಸಾಮ್ರಾಟ ಅಶೋಕನು ಸೇರಿ ಈ ದೇಶದ ಅನೇಕ ರಾಜ್ಯ ಮಹಾರಾಜರು ಮತ್ತು ಧರ್ಮ ಶ್ರೀಲಂಕಾ ಥೈಲ್ಯಾಂಡ್ ಜಪಾನ್ ಮತ್ತು ಇನ್ನಿತರ ದೇಶಗಳ ರಾಜರು ಹಾಗೂ ಬೌದ್ಧ ಉಪಾಸಕರು ಈ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರದ್ದಾ ಪೂರಕ ಕೊಡುಗೆ ನೀಡಿರುವುದು ಇತಿಹಾಸ ಭಾರತದಲ್ಲಿ ಹುಟ್ಟಿ ಏಷ್ಯಾ ಖಂಡದ ಎಲ್ಲಾ ದೇಶಗಳಲ್ಲಿ ಪರಿಸರಿಸಿ ಪ್ರಪಂಚದಾದ್ಯಂತ ವಿಜೃಂಭಿಸಿದ ಏಷ್ಯಾದ ಬೆಳಕು ಎಂದು ಪ್ರಖ್ಯಾತವಾದ ಬೌದ್ಧ ಧರ್ಮ ಕಾಲಾನುಕ್ರಮದಲ್ಲಿ ಮಾತೃಭೂಮಿಯಲ್ಲಿ ಮುಸ್ಲಿಂ ಮತ್ತು ಹಿಂದುಗಳ ಆಕ್ರಮಣಕ್ಕೆ ತುತ್ತಾಗಿ ಕಣ್ಮರೆಯಾಯಿತು ಕ್ರಿ ಶ 1150 ರಿಂದ ಕ್ರಿ ಶ 1800 ನ್ನು ಬೌದ್ಧ ಚರಿತ್ರೆಯಲ್ಲಿ ಕತ್ತಲೆ ಯುಗ ಎಂದು ದಾಖಲಿಸಲಾಗಿದೆ ಈ ಕಾರಣ ಕಾಲಘಟ್ಟದಲ್ಲಿ ಶಂಕರಾಚಾರ್ಯರ ಪಂಥಕ್ಕೆ ಸೇರಿದ ಗೋಸಾಯಿ ಕಮಂಡಿ ಗಿರಿ ಎಂಬ ಶೈವ ಬ್ರಾಹ್ಮಣ ಬುದ್ದಿಗಯದ ಮಾಬೂದಿ ಮಹಾವಿಹಾರ ಕ್ಷೇತ್ರವನ್ನು ಆಕ್ರಮಣ ಮಾಡಿ ತನ್ನ ನೆಲೆ ಸ್ಥಾಪಿಸಿದನು ಆಗ ದೆಹಲಿಯಲ್ಲಿ ಮೊಘಲ್ ದೊರೆ ಅಕ್ಬರನ ಆಡಳಿತವಿಟ್ಟು ಮುಂದೆ ಮೊಘಲ್ ಸುಲ್ತಾನ್ ಷಾ ಆಲಮ್ ( 1719 –1748) ಮಹಾಂತ ಲಾಲಗಿರಿಗೆ ಮಸ್ತಾಪೂರು ಮತ್ತು ತಾರಾಡಿಯಾ ಎಂಬ ಹಳ್ಳಿಗಳನ್ನು ದಾನ ಕೊಟ್ಟ ಈ ಹಳ್ಳಿಗಳ ಪಕ್ಕದಲ್ಲಿದ್ದ ಬೋದ ಗಯಾ ಕ್ಷೇತ್ರವನ್ನು ಮಹಾಂತರು ಸುಳ್ಳು ದಾಖಲೆ ಸೃಷ್ಟಿಸಿ ಸಂಪೂರ್ಣ ಕಬ್ಜಾ ಮಾಡಿದರು ಬ್ರಿಟಿಷ್ ಆಡಳಿತ ಸಂದರ್ಭದಲ್ಲಿ ಜನರಲ್ ಕನಿಂಗ್ ಹ್ಯಾಮ್ ನೇತೃತ್ವದಲ್ಲಿ ಉತ್ಕನನ ಮತ್ತು ಸಂಶೋಧನೆ ನಡೆದು ಬೌದ್ಧ ಇತಿಹಾಸ ಜಗತ್ತಿಗೆ ಪರಿಚಯಿಸಲಾಯಿತು. ಡಾಕ್ಟರ್ ರಾಜೇಂದ್ರ ಲಾಲ್ ಮಿಶ್ರಾ ಜೆಡಿ ಬೆಗ್ಲರ್ ಅಸೆ ವಿಲನ್ ಸರ್ ಗ್ರೀಸನ್ ಇನ್ನು ಮುಂತಾದ ಸಂಶೋಧಕರು ಬೌದ್ಧ ಇತಿಹಾಸ ಪುನರ್ ಪ್ರಕಟಿಸಿದರು.

1880 ರ ದಶಕದಲ್ಲಿ ಲೈಟ್ ಆಫ್ ಏಷಿಯಾದ ಲೇಖಕ ಎಡ್ರಿನ್ ಅನಾಲ್ಸ್ ಹಿಂದು ಬ್ರಾಹ್ಮಣರ ವಶದಲ್ಲಿರುವ ಬುದ್ಧ ಗಾಯದ ವಿಹಾರ ಬೌದ್ಧರಿಗೆ ಸೇರಬೇಕು ಎಂದು ಜಾಗತಿಕ ಮಟ್ಟದಲ್ಲಿ ಹೋರಾಟ ಆರಂಭಿಸಿದ್ದರು ಮುಂದೆ ಶ್ರೀಲಂಕಾದ ಅನಾಗರಿಕ ದಮ್ಮ ಪಾಲರು 21 ನೇ ಜನೇವರಿ 1891 ರಂದು ಬುದ್ಧ ಗಯಕ್ಕೆ ಬಂದು ಮಹಾಬೋಧಿ ಮಹಾ ವಿಹಾರದ ವಿಮೋಚನೆಗೆ ಸಂಕಲ್ಪ ತೊಟ್ಟು ಇಲ್ಲಿಯೇ ನೆಲೆಸಿ ಮಹಾ ಬೋಧಿ ಸೊಸೈಟಿಯನ್ನು ಸ್ಥಾಪಿಸಿ ಹೋರಾಟ ಆರಂಭಿಸಿದರು ಧಮ್ಮಪಾಲ್ ಮತ್ತವರ ಇಂಬಾಲಕರ ಮೇಲೆ ಮಹಾಂತೇಶ ಬೆಂಬಲಿಗರು ಹಲವು ಬಾರಿ ಮರಣಾಂತಿಕ ಹಲ್ಲೆ ಮಾಡಿದರು ಆದರೂ ಜೀವದ ಹಂಗು ತೊರೆದು ಹೋರಾಟ ಮುಂದುವರಿಸಿದ್ದರು. ಭಾರತ ಸ್ವಾತಂತ್ರ್ಯ ಚಳುವಳಿಯ ಪರ್ವಕಾಲದಲ್ಲಿ ಅಂದಿನ ರಾಷ್ಟ್ರೀಯ ಕಾಂಗ್ರೆಸ್ ನಾಯಕರಾದ ಮಹಾತ್ಮ ಗಾಂಧಿ ಜವಾಹರಲಾಲ್ ನೆಹರು ಡಾ ರಾಧಾಕೃಷ್ಣನ್ ಮತ್ತು ಹಿಂದು ಮಹಾಸಭೆಯ ನಾಯಕರು ಬೌದ್ಧರ ಬೇಡಿಕೆ ನ್ಯಾಯಯುತವಾಗಿದೆ ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ಸಮಸ್ಯೆಗೆ ಪರಿಹಾರ ಮಾಡುತ್ತೇವೆ ಎಂದು ಜಗತ್ತಿನ ಬೌದ್ಧರಿಗೆ ಭರವಸೆ ಕೊಟ್ಟರು 1933 ರಲ್ಲಿ ಅನಾಗರಿಕಾ ಧಮ್ಮಪಾಲರು ನಿಧನರಾದರು 1947ರ ಸ್ವಾತಂತ್ರ್ಯದ ನಂತರ ಬಿಹಾರ್ ವಿಧಾನಸಭೆಯಲ್ಲಿ ಟೆಂಪಲ್ ಆಕ್ಟ್ 1949 ಎಂಬ ಕಾಯ್ದೆ ಜಾರಿಗೆ ತಂದು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಾಲ್ಕು ಜನ ಬೌದ್ಧರು ನಾಲ್ಕು ಜನ ಹಿಂದೂಗಳನ್ನು ಸೇರಿಸಿ.ಟಿ.ಎಂ.ಸಿ(ಬೋದಗಯಾ)ಟೆಂಪಲ್ ಮ್ಯಾನೇಜೆಂಟ್ ಕಮಿಟಿ) ರಚಿಸಿ ಬೌದ್ಧರಿಗೆ ಅರ್ಧ ನ್ಯಾಯ ನೀಡಿದರು.ಬೌದ್ಧರು ತಮ್ಮ ಅಸಮಾಧಾನವನ್ನು ಪ್ರಕಟಿಸಿದರು ಆದರೆ ರಾಷ್ಟ್ರೀಯ ನಾಯಕರು ಬೌದ್ಧರಿಗೆ ಪೂರ್ಣ ಪ್ರಮಾಣದ ನ್ಯಾಯ ನೀಡಲಿಲ್ಲ. 1950 ಜನವರಿ 26ರಂದು ಸವಿಧಾನ ಜಾರಿಯಾದ ಮೇಲೆ ಈ ಕಾನೂನು ಸಂವಿಧಾನದ ಕಲಂ 3–ರ ಪ್ರಕಾರ ರದ್ದಾಗದೆ ಮುಂದುವರೆದಿದೆ ಸಂವಿಧಾನದ ಕಲಂ 25–26–29 ರನ್ನು ಉಲ್ಲೇಖಿಸಲಾಗಿದೆ.

ಈ ಸಂವಿಧಾನ ವಿರೋಧಿ ಬಿ.ಟಿ ಆಕ್ಟ್ 1949ರ ಅಡಿಯಲ್ಲಿ ಮಹಾಬೋದಿ ಮಹಾವಿಹಾರದ ಆಡಳಿತ ಮಂಡಳಿಯೊಳಗೆ ಸೇರದೆ ಹಿಂದೂ ಪುರೋಹಿತರು ಬೌದ್ಧ ಇತಿಹಾಸ ಮತ್ತು ಸಂಸ್ಕೃತಿಯ ನಾಶಕ್ಕೆ ಕೈ ಹಾಕಿದ್ದಾರೆ ಬುದ್ಧನ ವಿಗ್ರಹದ ಮುಂದೆ ಶಿವಲಿಂಗ ಇದೆ ಎಂದು ಸುಳ್ಳು ಸೃಷ್ಟಿಸಿದ್ದಾರೆ ಬುದ್ಧ ವಿಹಾರದ ಆವರಣದಲ್ಲಿ ಗಣಪತಿ ವಿಗ್ರಹವನ್ನಿಟ್ಟಿದ್ದಾರೆ ಹಲವು ಬೌದ್ಧ ಮೂರ್ತಿಗಳನ್ನು ಹಿಂದೂ ಕರಣ ಮಾಡಿದ್ದಾರೆ ಬುದ್ಧ ವಿಹಾರದ ಆವರಣದಲ್ಲಿ ಪಿಂಡ ದಾನ ಮಾಡಮುಖಂಡರ ಸಂಸ್ಕೃತಿಯನ್ನು ನಾಶ ಮಾಡುತ್ತಿದ್ದಾರೆ ಶಿವ ಪುರಾಣ ವಿಷ್ಣು ಪುರಾಣ ಪ್ರವಚನ ಪ್ರಾರಂಭಿಸಿ ಬೌದ್ಧ ಇತಿಹಾಸ ತಿರುಚಿ ಬುದ್ಧನು ವಿಷ್ಣುವಿನ ಅವತಾರವೆಂದು ಸುಳ್ಳು– ಹಬ್ಬಿಸಿ ಬೌದ್ಧರ ಭಾವನೆಗಳಿಗೆ ಧಕ್ಕೆ ತರುತ್ತಿದ್ದಾರೆ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ರವರು ನಾಗಪುರದ ಬೌದ್ಧ ಧಮ್ಮ ದೀಕ್ಷಾ ಸಮರಂಭದಲ್ಲಿ ಬೋಧಿಸಿದ 22 ಪ್ರತಿಜ್ಞೆಗಳಲ್ಲಿ ಬುದ್ಧ ವಿಷ್ಣುವಿನ ಅವತಾರ ಎಂಬುದನ್ನು ? ನಾನು ನಂಬುವುದಿಲ್ಲ ಎಂದು ಬ್ರಾಹ್ಮಣರ ಕುತಂತ್ರ ಎಂದು ಘೋಷಿಸಿದ್ದಾರೆ ಡಾಕ್ಟರ್ ಬಾಬಾ ಸಾಹೇಬ್ . ಅಂಬೇಡ್ಕರ್ ಕನಸಿನ ಪ್ರಬುದ್ಧ ಭಾರತದ ಮಹಾಬೋಧಿ – ಮಹಾ ವಿಹಾರದ ಮುಕ್ತಿ ಆಂದೋಲನವನ್ನು 1992 ರಿಂದ ಬಂದಂತ ಆರ್ಯ ನಾಗರ್ಜುನ ಸುರೈ – ಸಸಾಯಿಯವರ ನೇತೃತ್ವದಲ್ಲಿ ಅಂಬೇಡ್ಕರ್ ಅನುವಾಯಿಗಳು ಮುಂದುವರಿಸಿದರು ರಾಷ್ಟ್ರಮಟ್ಟದಲ್ಲಿ – ಹಲವು ಸುತ್ತಿನ ಹೋರಾಟಗಳು ಜರುಗಿದವು ಬಿಟಿ ಆಕ್ಟ್ 1949 ರ ಕಾಯ್ದೆಯಲ್ಲಿ ಹಾಗೂ ಬಿ.ಟಿ.ಎಂ.ಸಿ. – ಯಲ್ಲಿ ಕೆಲವು ಬದಲಾವಣೆಗಳು ಆದವೇ ಹೊರತು ಪೂರ್ಣಾ ರದ್ದು ಆಗಲಿಲ್ಲ ಈ ಸಂಬಂಧ ಕಳೆದ 15 4 ವರ್ಷಗಳಿಂದ ಬೌದ್ಧರು ನಡೆಸಿದ ಕಾನೂನು – ಹೋರಾಟಕ್ಕೂ ಇನ್ನು ಜಯ ಸಿಕ್ಕಿಲ್ಲ ಪ್ರಸ್ತುತ ಅಖಿಲ ಭಾರತ ಬೌದ್ಧ ವೇದಿಕೆ ಎಲ್ಲಾ ವಿಚಾರಧಾರೆಯ ಬೌದ್ಧ ಸಂಘ ಸಂಸ್ಥೆಗಳು ಹಾಗೂ ದೇಶದ ಅಂಬೇಡ್ಕರ್ ಅನುವಾಯಿಗಳನ್ನು ಒಂದೇ ವೇದಿಕೆಗೆ ತಂದು ಹೋರಾಟವನ್ನು ಆರಂಭಿಸಿದೆ. ಬೌದ್ಧರಿಗೆ ಯಾಕೇ ಈ ಅನ್ಯಾಯ? ಭಾರತದ ಸಂವಿಧಾನದ ಪ್ರಕಾರ ಎಲ್ಲಾ ಧರ್ಮಗಳು ಧಾರ್ಮಿಕ ಕೇಂದ್ರಗಳ ಆಡಳಿತವನ್ನು ಆಯಾ ಧರ್ಮದವರೇ ನಿರ್ವಹಿಸುತ್ತಿದ್ದಾರೆ ಸಿಖ್ ಗುರುದ್ವಾರ ಕಾಯ್ದೆ 1925ರ ಜಿ –ಪ್ರಕಾರ ಕೇಶಧಾರಿ ಸಿಖ್ ರಲ್ಲದವರು ಗುರುದ್ವಾರ ಆಡಳಿತ ಮಂಡಳಿ ಸದಸ್ಯರಾಗಲೂ ಸಾಧ್ಯವಿಲ್ಲ ದಿ ದರ್ಗಾ ಸ್ವಾಜಾ ಕಾಯ್ದೆ 1955 ರಂತೆ ಅನಾಪಿ ಮುಸ್ಲಿಮರು ಮಾತ್ರ ಅಜೀರ್ ದರ್ಗಾ ಕಮಿಟಿ ಸದಸ್ಯತ್ವ ರಾಗುತ್ತಾರೆ – ಒರಿಸ್ಸಾದ ಜಗನ್ನಾಥ ಮಂದಿರ ಕಾಯ್ದೆ 1905 ರ ಕೇರಳದ ಗುರುವಾಯುರ್ ದೇವಸ್ಥಾನದ ಕಾಯ್ದೆ 1978 – ಮಧ್ಯ ಪ್ರದೇಶದ ಮಹಾ ಕಾಳೇಶ್ವರ ದೇವಸ್ಥಾನ ಕಾಯ್ದೆ (ಉಜ್ಜೈನಿ) 1982 ಉತ್ತರಪ್ರದೇಶದ ಕಾಶಿ ವಿಶ್ವನಾಥ – ಮಂದಿರ ಕಾಯ್ದೆ (ವಾರಣಾಸಿ) 1983 ಕಾಶ್ಮೀರದ ಶ್ರೀ ಮಾತಾ ವೈಷ್ಣವಿ ದೇವಿ ಮಂದಿರ ಕಾಯ್ದೆ 1988 ರ ಮತ್ತು ತಿರುಪತಿ ಶ್ರೀಶೈಲ ಹಾಗೂ ಇನ್ನಿತರ ಹಿಂದೂ ಧಾರ್ಮಿಕ ಕ್ಷೇತ್ರಗಳ ಕಾನೂನು ಪ್ರಕಾರ ಕೇವಲ ಹಿಂದುಗಳು ಮಾತ್ರ ಆಡಳಿತ ಮಂಡಳಿ ಸದಸ್ಯರಾಗಿದ್ದಾರೆ 1. ಆದ–ರೇ ಬೋದಗಯಾ ಟೆಂಪಲ್ ಆಕ್ಟ್ 1949 ಪ್ರಕಾರ ಬೌದ್ಧರಿಗೆ ನಮ್ಮ ದೇವಾಲಗಿರುವ ನಿರ್ವಹಣೆಮಾಡಲು–ಅಧಿಕಾರವಿಲ್ಲಬುದ್ಧ ವಿಹಾರ ಹಿಂದುಗಳ ನಿಯಂತ್ರಣದಲ್ಲಿದೆ ಇದು ಬೌದ್ಧ ಧರ್ಮಿಯರ ಮತ್ತು * ಅಂಬೇಡ್ಕರ್ ಅನುಯಾಯಿಗಳು ಹಾಗೂ ಭಾರತದ ಸಂವಿಧಾನವಾದಿ ಪ್ರಗತಿಪರ ಚಿಂತಕರ ಸ್ವಾಭಿಮಾನದ ಪ್ರಶ್ನೆಯಾಗಿದೆ ದೇಶವನ್ನಾಳುವ ಸರ್ಕಾರಗಳು ನವಂಬರ್ 26 ರಂದು ಸಂವಿಧಾನ ದಿನಾಚರಣೆಯನ್ನು ಸಂಭ್ರಮದಿಂದ ಆಚರಣೆ ಮಾಡುತ್ತಿದ್ದಾರೆ ಈ ದೇಶದ ಬೌದ್ಧ ಸಮುದಾಯ ಮತ್ತು ಅಂಬೇಡ್ಕರ್ ಅನುವಾಯಿಗಳು ಸಂವಿಧಾನ ದತ್ತ ಧಾರ್ಮಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ ಈ ಹಿನ್ನೆಲೆಯಲ್ಲಿ ಬೌದ್ಧರಿಗೆ ನಮ್ಮ – ಧಾರ್ಮಿಕ ಕ್ಷೇತ್ರ ಸ್ವತಂತ್ರವಾಗಿ ನಿರ್ವಹಿಸುವ ಅವಕಾಶಕ್ಕಾಗಿ ಸಂವಿಧಾನದ ಕಲಂ 3. 25. 26. ಮತ್ತು 29 ಅನ್ನು ಜಾರಿಗೊಳಿಸಲು ಅಡ್ಡಿಯಾಗಿರುವ : ಬಿ.ಟಿ ಆಕ್ಟ್ 1949 ಅನ್ನು ರದ್ದುಪಡಿಸಿ ಬುದ್ಧ ಗಯಾದ ಮಹಾಬೋಧಿ ಮಹಾ ವಿಹಾರದ ಆಡಳಿತ – ಸಂಪೂರ್ಣವಾಗಿ ಬೌದ್ಧರಿಗೆ ನೀಡಬೇಕೆಂದು

ತಕ್ಷಶಿಲಾ ಮಹಾಬುದ್ಧ ವಿಹಾರ ಇಂಟ–ರ್ ನ್ಯಾಶನಲ್ ಚಾರಿಟೇಬಲ್ ತೇರದಾಳ ಹಾಗೂ ಬೌದ್ಧ ವಿಹಾರ ನಿರ್ಮಾಣ ಸಂಸ್ಥೆ ನವನಗರ–ಬಾಗಲಕೋಟ ಇವರು ವತಿಯಿಂದ ಒತ್ತಾಯಿಸಿ ಮಾನ್ಯ ರಾಷ್ಟ್ರಪತಿಗಳು ನವದೆಹಲಿ ಇವರಿಗೆ ಬಾಗಲಕೋಟ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರವನ್ನು ಸಲ್ಲಿಸಿದೆ.

ಈ ಸಂದರ್ಭದಲ್ಲಿ ಬೌದ್ಧ ವಿಹಾರ ನಿರ್ಮಾಣ ಸಂಸ್ಥೆ ನವನಗರ–ಬಾಗಲಕೋಟ ಅಧ್ಯಕ್ಷರಾದ ಪ್ರೇಮನಾಥ ಗರಸಂಗಿ,ಪ್ರಧಾನ ಕಾರ್ಯದರ್ಶಿ ಸದಾಶಿವ ಕೊಡಬಾಗಿ,ಸಂಘಟನಾಕಾರ್ಯದರ್ಶಿ ಮಹೇಶ ಬೀಳಗಿ,ಖಜಾಂಚಿ ಸಂಜೀವಯ್ಯ ಕಾಂಬಳೆ, ರಾಮಚಂದ್ರ ನಾಟೇಕರ,ಗೀತಾ ಕೊಡಬಾಗಿ,

ಕಾವೇರಿ ಗರಸಂಗಿ,ಶೀಲಾದೇವಿ ಗೆಜ್ಜಲಗಟ್ಟಿ,ವಿ.ಜಿ.ಚಂದರಗಿ,ಬ್ರಹ್ಮಾನಂದ ಕಾಂಬಳೆ ,ಎಸ್.ಪಿ.ಚಲವಾದಿ,ಬಸಪ್ಪ ಚಲವಾದಿ ಮೊದಲಾದ ದಲಿತ ಮುಖಂಡರು ಭಾಗವಹಿಸಿದ್ದರು.

# ಭಾವನೆಗಳನ್ನು ಮುಕ್ತವಾಗಿ ಕವಿತೆ ರೂಪದಲ್ಲಿ ಬರೆಯಿರಿ



**ರಬಕವಿ–ಬನಹಟ್ಟಿ :** ಮಕ್ಕಳಲ್ಲಿ ಬಾಲ್ಯದಲ್ಲಿಯೇ ಕವಿತೆ ಬರೆಯುವ ಹವ್ಯಾಸ ಬೆಳೆಸಿದರೆ ಉತ್ತಮ ಕವಿಗಳನ್ನು ನಿರ್ಮಿಸಲು ಸಾಧ್ಯ. ಮಕ್ಕಳು ತಮ್ಮ ಭಾವನೆಗಳನ್ನು ಮುಕ್ತವಾಗಿ ಕವಿತೆ ರೂಪದಲ್ಲಿ ಬರೆಯಿರಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ. ಕೃ. ಮೇಗಾಡಿ ಅಭಿಪ್ರಾಯಪಟ್ಟರು.

ರಾಮಪುರದಲ್ಲಿ ನಡೆದ ತಾಲೂಕು ಮಟ್ಟದ ಎರಡನೇ ಮಕ್ಕಳ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಸಮನ್ವಯಕಾರರ ನುಡಿಗಳನ್ನಾಡುತ್ತ ಭಾವನೆಗಳನ್ನು ಸೂಕ್ತ ರೀತಿಯಲ್ಲಿ ವ್ಯಕ್ತಪಡಿಸುವ ಮಾಧ್ಯಮ ಕಾವ್ಯ. ತಮ್ಮ ಬಾಲ್ಯದ ಅನುಭವಗಳು ಮುಗ್ಧ ವಿಚಾರಗಳನ್ನು ಮಕ್ಕಳು ಕಾವ್ಯರೂಪದಲ್ಲಿ ಹೊರಹೊಮ್ಮಿಸಬೇಕು ಎಂದು ಹೇಳಿದರು.

ಆಶಯ ನುಡಿಗಳನ್ನು ಹೇಳಿದ ಪ್ರಾಚಾರ್ಯೆ ಚಂದ್ರಪ್ರಭಾ ಬಾಗಲಕೋಟ, ಮಕ್ಕಳ ಕವಿತೆಗಳಿಗೆ ಅದರದೇ ಆದ ಮಹತ್ವ ಇದ್ದು ಹಿರಿಯ ಕವಿಗಳು ಬಾಲಕವಿಗಳನ್ನು ಪ್ರೋತ್ಸಾಹಿಸುವ ಕಾರ್ಯ ಮಾಡಬೇಕು ಎಂದರು.

ಕವಿಗೋಷ್ಠಿಯಲ್ಲಿ ಬಾಲಕವಿಗಳಾದ ದಕ್ಷಣಗೌಡ ಪಾಟೀಲ, ನಿಶ್ಚಿತ ಹವಾಲ್ದಾರ, ಶಿವಾನಿ ಕಮದಿನ್ನಿ, ಸಿಂಚನಾ ವಸ್ತ್ರದ, ವಿದ್ಯಾಶ್ರೀ ಗೋಕಾವಿ, ವಿಕ್ರಾಂತ ಹೊನಕಟ್ಟಿ, ಸಾಕ್ಷಿ ಬುದ್ನಿ, ಜ್ಯೋತಿ ಮಾನಗಾವಿ, ಶ್ರಾವಣಿ ಪಾಟೀಲ, ಭರತ ಸಿಂಹಾಸನ, ವೀಣಾ ಆಲಗುಂಡಿ ವಿವಿಧ ವಿಷಯಗಳ ಕುರಿತು ಕವನ ವಾಚನ ಮಾಡಿ ಎಲ್ಲರ ಗಮನ ಸೆಳೆದರು.

ಅಧ್ಯಕ್ಷತೆಯನ್ನು ವಹಿಸಿದ್ದ ಶ್ರದ್ಧಾ ಶ್ರೀಶೈಲ ಬುರ್ಲಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಭೀಮಪ್ಪ ಕಡಕೋಳ, ಬಾಬಾಗೌಡ ಪಾಟೀಲ, ರಾಜೇಶ್ವರಿ ದುತ್ತರಗಾಂವಿ, ಆರ್. ಎಸ್. ಸಿಂಗಣ ಉಪಸ್ಥಿತರಿದ್ದರು.

ಐಶ್ವರ್ಯಾ ತುರಾದಿ, ಪೂಜಾ ಬೆಕ್ಕೇರಿ ಸೊಗಸಾಗಿ ನಿರೂಪಿಸಿದರು. ಸಿ. ಬಿ. ಪಾಲಭಾಂವಿ ಸ್ವಾಗತಿಸಿದರು. ಕೊನೆಗೆ ರಾಜೇಶ್ವರಿ ವಿ. ಬಾಣಕಾರ ವಂದಿಸಿದರು.

# ಆಶುಭಾಷಣ ಸ್ಪರ್ಧೆಯಲ್ಲಿ ಸೃಷ್ಟಿ ಬಿಂಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆ

**ಇಳಕಲ್ :** ನಗರದ ಗಾಯತ್ರಿ ಮಹಿಳಾ ಸಂಘದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಕುಮಾರಿ ಸೃಷ್ಟಿ ದೇವೇಂದ್ರಪ್ಪ ಬಿಂಗಿ ಸೂಳೆಭಾವಿಯಲ್ಲಿ ನಡೆದ ತಾಲೂಕ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.



ಅದೇ ರೀತಿ ಸಂಸ್ಕೃತ ಧಾರ್ಮಿಕ ಪಠಣದಲ್ಲಿ ಭಾಗವಹಿಸಿದ ಗೌತಮಿ ಗದಗಿನಮಠ ಹಾಗೂ ಛದ್ಮವೇಷದಲ್ಲಿ ಸಾನ್ವಿ ಮಂಜುನಾಥ ಬೆಣ್ಣೂರ ದ್ವಿತೀಯ ಸ್ಥಾನ ಗಳಿಸಿದರೆ, ಮದನ ನಾಗೇಶ ಗೋಟುರ ಪ್ರಬಂಧದಲ್ಲಿ ತೃತೀಯ ಸ್ಥಾನ ಗಳಿಸಿದ್ದಾನೆ ಇವರೆಲ್ಲರಿಗೂ ಗಾಯತ್ರಿ ಮಹಿಳಾ ಸಂಘದ ಅಧ್ಯಕ್ಷರಾದ ಲಲಿತಾಬಾಯಿ ಸಪ್ಪರದ ಆಡಳಿತಾಧಿಕಾರಿ ಟಿ.ಎಂ. ರಾಮದುರ್ಗ ಮುಖ್ಯಗುರು ಮಲ್ಲಿಕಾರ್ಜುನ ಇಂದರಗಿ ಆಡಳಿತ ಮಂಡಳಿ ಸದಸ್ಯರು ಹಾಗೂ ಶಾಲಾ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State